# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಡಿಸೆಂಬರ್ 27, 2021

ಸಂಪುಟ : 48 ಸಂಚಿಕೆ : 226 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


# ದ.ಆಫ್ರಿಕಾದಲ್ಲಿ ಓಮಿಕ್ರಾನ್ ಇಳಿಕೆ

## ಇಂಗ್ಲೆಂಡ್, ಸ್ಕಾಟ್‌ಲ್ಯಾಂಡ್‌ಗಳಿಂದಲೂ ಸಮಾಧಾನದ ವರದಿಗಳು



ನವದೆಹಲಿ, ಡಿ. 26 – ಓಮಿಕ್ರಾನ್ ಪ್ರಕರಣಗಳು ದೇಶದಲ್ಲಿ ಹೆಚ್ಚುತ್ತಿರುವ ನಡುವೆ ದಕ್ಷಿಣ ಆಫ್ರಿಕಾ, ಸ್ಕಾಟ್‌ಲ್ಯಾಂಡ್ ಹಾಗೂ ಇಂಗ್ಲೆಂಡ್‌ಗಳಿಂದ ತುಸು ಸಮಾಧಾನ ತರುವ ವರದಿಗಳು ಬಂದಿವೆ.

ದಕ್ಷಿಣ ಆಫ್ರಿಕಾದಲ್ಲಿ ಮೊದಲ ಓಮಿಕ್ರಾನ್ ರೂಪಾಂತರಿ ಗುರುತಿಸಲಾಗಿತ್ತು. ನಂತರದ ದಿನಗಳಲ್ಲಿ ಕೊರೊನಾ ಪ್ರಕರಣಗಳು ತೀವ್ರ ಏರಿಕೆ ಕಂಡಿದ್ದವು. ಈಗ ಆ ದೇಶದಲ್ಲಿ ಕೊರೊನಾ ಪ್ರಕರಣಗಳು ಅಷ್ಟೇ ವೇಗವಾಗಿ ಕಡಿಮೆಯಾಗುತ್ತಿವೆ. ನವೆಂಬರ್ 8ರಂದು ದಕ್ಷಿಣ ಆಫ್ರಿಕಾದಲ್ಲಿ ವಾರದ ಸರಾಸರಿ ಪ್ರಕರಣಗಳ ಸಂಖ್ಯೆ 266ರಷ್ಟಿತ್ತು. ನಂತರ ಡಿಸೆಂಬರ್ 13ರ ವೇಳೆಗೆ 23,437ಕ್ಕೆ ತಲುಪಿತ್ತು. ಡಿಸೆಂಬರ್ 25ರವರೆಗೆ ಅದು 16 ಸಾವಿರದ ಹಂತಕ್ಕೆ ಕುಸಿದಿದೆ.

ಕಳೆದ ಅಲೆಗಳಿಗೆ ಹೋಲಿಸಿದರೆ ಓಮಿಕ್ರಾನ್ ಕಾರಣದಿಂದ ಆಸ್ಪತ್ರೆಗೆ ದಾಖಲಾಗುವವರ ಹಾಗೂ ತೀವ್ರ ಸ್ವರೂಪದ ಸೋಂಕಿಗೆ ಗುರಿಯಾಗುವವರ ಸಂಖ್ಯೆಯೂ ಕಡಿಮೆ ಇತ್ತು. ಹಿಂದಿನ ಸೋಂಕಿನಿಂದ ದೊರೆತ ರೋಗ ನಿರೋಧಕತೆ ಹಾಗೂ ಲಸಿಕೆಗಳು ಇದಕ್ಕೆ ಕಾರಣವಿರಬಹುದು ಎಂದೂ ಹೇಳಲಾಗುತ್ತಿದೆ.

ದಕ್ಷಿಣ ಆಫ್ರಿಕಾದಲ್ಲಿ ನಡೆಸಲಾದ ಅಧ್ಯಯನದ ಪ್ರಕಾರ, ಓಮಿಕ್ರಾನ್ ಸೋಂಕಿನಿಂದಾಗಿ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಡೆಲ್ಟಾಗೆ ಹೋಲಿಸಿದರೆ ಶೇ.70ರಷ್ಟು ಕಡಿಮೆ. ಸ್ಕಾಟ್‌ಲ್ಯಾಂಡ್‌ನಲ್ಲಿ ನಡೆಸಲಾದ ಅಧ್ಯಯನದ ಪ್ರಕಾರ, ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಮೂರನೇ ಎರಡರಷ್ಟು ಕಡಿಮೆ. ಇಂಗ್ಲೆಂಡ್‌ನಲ್ಲಿ ನಡೆದ ಅಧ್ಯಯನದಲ್ಲಿ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಶೇ.20ರಷ್ಟು ಕಡಿಮೆ ಎಂಬುದು ಕಂಡು ಬಂದಿದೆ. ಅಲ್ಲದೇ ಒಂದಕ್ಕೂ ಹೆಚ್ಚು ದಿನ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಶೇ.45ರಷ್ಟು ಕಡಿಮೆಯಾಗಿದೆ.

ಓಮಿಕ್ರಾನ್ ಸೋಂಕು ಈಗಲೂ ಹೊಸದಾಗಿದೆ. ಹೀಗಾಗಿ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಮುಂದಿನ ದಿನಗಳಲ್ಲಿ ಹೆಚ್ಚಾಗುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ ಎಂದು ತಜ್ಞರು ಎಚ್ಚರಿಸಿದ್ದಾರೆ.

ಭಾರತದಲ್ಲಿ ಕೊರೊನಾ ಲಸಿಕೆ ಪಡೆದವರ ಪ್ರಮಾಣ ಈಗ ಹೆಚ್ಚಾಗಿದೆ. ಡೆಲ್ಟಾ ಅಲೆ ಬಂದಾಗ ಶೇ.1.9ರಷ್ಟು ಜನರು ಮಾತ್ರಪೂರ್ಣ ಲಸಿಕೆ ಪಡೆದಿದ್ದರು. ಕಳೆದ ಡಿಸೆಂಬರ್ 23ರ ವೇಳೆಗೆ ಶೇ.41ರಷ್ಟು ಭಾರತೀಯರು ಪೂರ್ಣ ಹಾಗೂ ಶೇ.19ರಷ್ಟು ಜನರು ಕನಿಷ್ಠ ಒಂದು ಡೋಸ್ ಲಸಿಕೆ ಪಡೆದಿದ್ದಾರೆ.

(3ನೇ ಪುಟಕ್ಕೆ)

# ನಾಳೆಯಿಂದ ರಾತ್ರಿ ಕರ್ಫ್ಯೂ

## ಹತ್ತು ದಿನಗಳ ಕಾಲ ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ನಿರ್ಬಂಧ

ಬೆಂಗಳೂರು, ಡಿ. 26 – ಕೊರೊನಾ ಹೆಚ್ಚಾಗುವ ಕಳವಳಗಳ ಹಿನ್ನೆಲೆಯಲ್ಲಿ ಡಿ.28ರಿಂದ ಹತ್ತು ದಿನಗಳ ಕಾಲ ರಾತ್ರಿ ಕರ್ಫ್ಯೂ ವಿಧಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ ಜಾರಿಯಲ್ಲಿರಲಿದೆ.

ಅಲ್ಲದೇ, ಹೊಸ ವರ್ಷದ ಔತಣಕೂಟಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಜನ ಸೇರುವುದರ ಮೇಲೆ ನಿಷೇಧ ಹೇರಲಾಗಿದೆ.

ಪತ್ರಕರ್ತರೊಂದಿಗೆ ಮಾತನಾಡುತ್ತಾ ಈ ವಿಷಯ ತಿಳಿಸಿರುವ ಆರೋಗ್ಯ ಸಚಿವ ಸುಧಾಕರ್, ಡಿ.28ರಿಂದ ಜನವರಿ 7ರ ಬೆಳಗಿನ ಜಾವದವರೆಗೆ ರಾತ್ರಿ ಹತ್ತು ಗಂಟೆಯಿಂದ ಬೆಳಗಿನ ಜಾವ 5 ಗಂಟೆಯವರೆಗೆ ಕರ್ಫ್ಯೂ ಇರಲಿದೆ. ಈ ಅವಧಿಯಲ್ಲಿ ಯಾವುದೇ ಚಟುವಟಿಕೆಗಳಿಗೆ ಅವಕಾಶ ಇರುವುದಿಲ್ಲ ಎಂದಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಹಿರಿಯ ಸಚಿವರು, ಅಧಿಕಾರಿಗಳು ಹಾಗೂ ಕೊರೊನಾ ತಾಂತ್ರಿಕ ಸಲಹಾ ಸಮಿತಿಯ ಜೊತೆ ಸಭೆ ನಡೆಸಿದ ನಂತರ ಅವರು ಈ ಹೇಳಿಕೆ ನೀಡಿದ್ದಾರೆ.

**ರಾತ್ರಿ ಕರ್ಫ್ಯೂ ವೇಳೆ ಸಂಚರಿಸಲು ಅವಕಾಶ ಇದ್ದವರು ಸೂಕ್ತ ಗುರುತಿನ ಚೀಟಿಗಳನ್ನು ಹೊಂದಿರಬೇಕಿದೆ. ಪ್ರಯಾಣದ ದಾಖಲೆ ಹೊಂದಿದ್ದವರು ಬಸ್, ರೈಲು ಹಾಗೂ ವಿಮಾನಯಾನ ಕೈಗೊಳ್ಳಲು ಅವಕಾಶ.**

ಹೊಸವರ್ಷಾಚರಣೆಗಾಗಿ ಹೊರಾಂಗಣದಲ್ಲಿ ಯಾವುದೇ ಸಮಾರಂಭಗಳು ಹಾಗೂ ಕೂಟಗಳನ್ನು ಆಯೋಜಿಸುವಂತಿಲ್ಲ. ವಿಶೇಷವಾಗಿ ಡಿ.ಜೆ.ಗಳಿಗೆ ಅವಕಾಶವಿರುವುದಿಲ್ಲ. ಹೋಟೆಲ್, ಪಬ್, ಕ್ಲಬ್ ಹಾಗೂ ರೆಸ್ಟೋರೆಂಟ್ ಇತ್ಯಾದಿಗಳು ಶೇ.50ರ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಬೇಕಿದೆ ಎಂದವರು ಹೇಳಿದ್ದಾರೆ. ಈ ನಿರ್ಬಂಧ ಡಿಸೆಂಬರ್ 30ರಿಂದ ಜನವರಿ 2ರವರೆಗೆ ಅನ್ವಯವಾಗುತ್ತದೆ. ರಾಜ್ಯದಲ್ಲಿ ಕೊರೊನಾ ಕ್ಲಸ್ಟರ್‌ಗಳ ಸಂಖ್ಯೆ ನಿರಂತರವಾಗಿ ಹೆಚ್ಚಾಗುತ್ತಿದೆ. ರಾಜ್ಯದಲ್ಲಿ ಓಮಿಕ್ರಾನ್ ಸೋಂಕಿತರ ಸಂಖ್ಯೆ 38ಕ್ಕೆ ತಲುಪಿದೆ.

ಪರಿಸ್ಥಿತಿ ನಿರಂತರವಾಗಿ ಬದಲಾಗುವುದರಿಂದ ಹೆಚ್ಚುವರಿ ನಿಯಂತ್ರಣ ಕ್ರಮಗಳ ಮೂಲಕ ಕೊರೊನಾ ಹರಡುವಿಕೆಯನ್ನು ತಡೆಯಲು ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಸರ್ಕಾರ ಹೇಳಿದೆ.

ಡಿಸೆಂಬರ್ 28ರ ನಂತರ ಮದುವೆ ಸೇರಿದಂತೆ ಎಲ್ಲ ಸಮಾರಂಭಗಳಲ್ಲಿ ಗರಿಷ್ಠ 300 ಜನ ಮಾತ್ರ ಭಾಗವಹಿಸಬಹುದು. ಸಮಾರಂಭಗಳ ಆಯೋಜಕರು ಕೊರೊನಾ ಸೂಕ್ತ ವರ್ತನೆ ಅಳವಡಿಸಿಕೊಳ್ಳಬೇಕಿದೆ. ರಾತ್ರಿ ಕರ್ಫ್ಯೂ ಇರುವ ಸಂದರ್ಭದಲ್ಲೂ ಸಹ ಅಗತ್ಯ ಚಟುವಟಿಕೆಗಳು, ರೋಗಿಗಳು ಹಾಗೂ ಅವರಿಗೆ ಸೇವೆ ಒದಗಿಸುತ್ತಿರುವವರು, ಕೈಗಾರಿಕೆಗಳು, ಸರಕು ಸಾಗಣೆ ವಾಹನಗಳು, ಬಸ್, ರೈಲು, ಮೆಟ್ರೋ, ವಿಮಾನ, ಮನೆಗಳಿಗೆ ಸರಕುಗಳನ್ನು ಪೂರೈಸುವವರು ಹಾಗೂ ಇ- ಕಾಮರ್ಸ್ ನಿರ್ವಹಿಸುವವರು ಸಂಚಾರ ನಡೆಸಬಹುದು.

ಪ್ರಸಕ್ತ ನಾವು 4,000 ಐ.ಸಿ.ಯು. ಬೆಡ್‌ಗಳನ್ನು ಹೊಂದಿದ್ದೇವೆ. ಪರಿಸ್ಥಿತಿ ಎದುರಿಸಲು 3,191 ಹೆಚ್ಚುವರಿ ಬೆಡ್‌ಗಳನ್ನು ಹೊಂದಲಿದ್ದೇವೆ. ಇದೇ ರೀತಿ 30 ಸಾವಿರ ಆಕ್ಸಿಜನ್ ಹೊಂದಿರುವ ಬೆಡ್‌ಗಳನ್ನು ಸೇರ್ಪಡೆ ಮಾಡಲಾಗುವುದು ಎಂದು ಸಚಿವ ಸುಧಾಕರ್ ಹೇಳಿದ್ದಾರೆ.

# ಧರ್ಮ ಮಾರ್ಗದಲ್ಲಿ ನಡೆದರೆ ಮನಸ್ಸಿಗೆ ಶಾಂತಿ

## ಜಗಳೂರು: ಹಿರೇಮಲ್ಲನಕೆರೆ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಅಭಿಮತ



ಜಗಳೂರು, ಡಿ.26- 12ನೇ ಶತಮಾನದಲ್ಲಿನ ಶಿವ ಶರಣರು ಸಮಾಜಕ್ಕೆ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಅವರು ಹಾಕಿದ ನ್ಯಾಯ ಮತ್ತು ಧರ್ಮ ಮಾರ್ಗದಲ್ಲಿ ನಡೆದರೆ ನೆಮ್ಮದಿಯ ಜೀವನ ಸಾಗಿಸಲು ಸಾಧ್ಯ ಎಂದು ಹೂವಿನಹಡಗಲಿ ತಾಲ್ಲೂಕು ಹಿರೇಮಲ್ಲನಕೆರೆ ವಿರಕ್ತಮಠದ ಶ್ರೀ ಮ.ನಿ.ಪ್ರ.ಅಭಿನವ ಚನ್ನಬಸವ ಮಹಾಸ್ವಾಮೀಜಿ ಹೇಳಿದರು.

ಪಟ್ಟಣದ ಪ್ರೇರಣಾ ಸಮಾಜ ಸೇವಾ ಸಂಸ್ಥೆಯ ಚರ್ಚ್ ಆವರಣದಲ್ಲಿ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸರ್ವಧರ್ಮ ಸಮನ್ವಯ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ನೀರಿನಿಂದ ಹುಟ್ಟುವ ಉಪ್ಪು, ಆನೆಕಲ್ಲು ಕರಗುತ್ತದೆ. ಆದರೆ ಅದೇ ನೀರಿನಿಂದ ಹುಟ್ಟುವ ಮುತ್ತು ಎಂದಿಗೂ ಕರಗುವುದಿಲ್ಲ. ಇದರರ್ಥ ಧರ್ಮದ ಹಾದಿಯಲ್ಲಿ ಸಾಗುವವರಿಗೆ ನೆಮ್ಮದಿ, ಶಾಂತಿ ದೊರೆಯಲಿದೆ ಎಂಬುದಾಗಿದೆ ಎಂದು ತಿಳಿಸಿದರು.

ಚಿತ್ರದುರ್ಗದ ಮೌಲಾನಾ ಮಹಮ್ಮದ್ ಅಜರ್ ಅಲಿ ಮಾತನಾಡಿ, ಎಲ್ಲಿಯ ತನಕ ನಾವು ಮನುಷ್ಯರಾಗುವುದಿಲ್ಲವೋ, ಅಲ್ಲಿಯವರೆಗೆ ನೆಮ್ಮದಿ, ಶಾಂತಿ ದೊರೆಯುವುದಿಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮ ಸೇರಿದಂತೆ ಎಲ್ಲಾ ಧರ್ಮಗಳ ಸಾರ ಒಂದೇ ಆಗಿದೆ ಎಂದರು.

ಶಿವಮೊಗ್ಗದ ಮೌಂಟ್ ಕಾರ್ಮೆಲ್ ಶಾಲೆಯ ವ್ಯವಸ್ಥಾಪಕ ವಂ.ಫಾ.ಜೆರೊಮ್ ಮೊರಸ್ ಮಾತನಾಡಿ, ಏಕತೆಯನ್ನು ಕಾಪಾಡುವುದರಿಂದ ಹಾಗೂ ಉತ್ತಮ ಹಾದಿಯಲ್ಲಿ ನಡೆಯುವುದರಿಂದ ಶಾಂತಿ ದೊರೆಯಲಿದೆ.

(2ನೇ ಪುಟಕ್ಕೆ)

# ಗ್ರಾಮೀಣ ಭಾಗದಲ್ಲಿನ್ನೂ ಅಸ್ಪೃಶ್ಯತೆ ಜೀವಂತ



ಹರಪನಹಳ್ಳಿ, ಡಿ.26- ಗ್ರಾಮೀಣ ಭಾರತದಲ್ಲಿ ಅಸ್ಪೃಶ್ಯತೆ ಇವತ್ತಿಗೂ ಜೀವಂತವಾಗಿದೆ. ಈ ಜಾತೀಯತೆಯನ್ನು ಹೋಗಲಾಡಿಸದೇ ಇದ್ದರೆ ಭಾರತ ದೇಶ ಇಬ್ಭಾಗವಾಗುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ ಎಂದು ಡಾ. ಅಂಬೇಡ್ಕರ್ ಪೀಪಲ್ ಪಾರ್ಟಿಯ ರಾಜ್ಯಾಧ್ಯಕ್ಷ ಎಂ.ಸಿ ಕೃಷ್ಣ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಂವಿಧಾನದ 17ನೇ ವಿಧಿ ಪ್ರಕಾರ ಅಸ್ಪೃಶ್ಯತೆಯನ್ನು ನಿಷೇಧಿಸಲಾಗಿದೆ. 1955ರ ಅಸ್ಪೃಶ್ಯತೆ ಅಪರಾಧಗಳ ಕಾಯಿದೆಯು, 1976ರಲ್ಲಿ ನಾಗರಿಕರ ಹಕ್ಕುಗಳ ರಕ್ಷಣೆ ಕಾಯಿದೆ ಎಂದು ಪುನರ್ ನಾಮಕರಣಗೊಂಡು ಚಾಲ್ತಿಯಲ್ಲಿದೆ. ಸಮಾಜದ ಮನೋಭಾವನೆಗಳಲ್ಲಿ ಬದಲಾವಣೆಗಳಾಗಿಲ್ಲ ಎಂಬುದಕ್ಕೆ ಪ್ರಸಕ್ತ ವಿದ್ಯಮಾನಗಳೇ ದೊಡ್ಡ ಉದಾಹರಣೆ. ಹರಪನಹಳ್ಳಿ ತಾಲ್ಲೂಕು ಅರಸಿಕೇರಿ ಹೋಬಳಿ ಚಿಕ್ಕಮೇಗಳಗೆರೆ ಗ್ರಾಮದಲ್ಲಿ ದೇವಸ್ಥಾನಗಳಿಗೆ ಪ್ರವೇಶವಿಲ್ಲ, ಹೋಟೆಲ್‌ಗಳಿಗೆ ನಿರಾಕರಣೆ

**ಡಾ. ಅಂಬೇಡ್ಕರ್ ಪೀಪಲ್ ಪಾರ್ಟಿ ರಾಜ್ಯಾಧ್ಯಕ್ಷ ಎಂ.ಸಿ ಕೃಷ್ಣ**

ಇದೆ, ಕಟಿಂಗ್ ಶಾಪ್‌ಗೆ ನಿರ್ಬಂಧವಿದೆ. ಅಲ್ಲದೇ ಪರಿಶಿಷ್ಟ ಜಾತಿ ಸಮುದಾಯದವರು ಅವರ ಬೀದಿಗೆ ಸಂಬಂಧಪಟ್ಟ ಜಾಗದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಮಾಡುವ ಸಂದರ್ಭದಲ್ಲಿ ಮೇಲ್ವರ್ಗದವರು ಅಡ್ಡಿಪಡಿಸಿದ್ದಾರೆ. ಈ ಸಂಬಂಧ ಎ.ಸಿ. ಯವರಿಗೆ, ತಹಶೀಲ್ದಾರ್‌ಗೆ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಇಓ ರವರಿಗೆ ಮನವಿ ಸಲ್ಲಿಸಿದ್ದೇವೆ ಎಂದು ತಿಳಿಸಿದರು.

ಚಿಕ್ಕಮೇಗಳಗೆರೆ ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಣೆ ಮಾಡುತ್ತಿರುವ ತಪ್ಪಿತಸ್ಥರ ವಿರುದ್ಧ ವಿಜಯನಗರ ಜಿಲ್ಲಾಡಳಿತ 1955ರ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯಡಿ ಕೇಸ್ ದಾಖಲು ಮಾಡಿಕೊಂಡು ಶಿಕ್ಷೆಗೆ

(3ನೇ ಪುಟಕ್ಕೆ)

# ಪುನೀತ್ ರಾಜ್ ಆದರ್ಶದಂತೆ ರಕ್ತ-ನೇತ್ರದಾನ ಮಾಡಬೇಕು



ದಾವಣಗೆರೆ, ಡಿ. 27 – ನಟ ಪುನೀತ್ ರಾಜ್‌ಕುಮಾರ್ ಅವರು ತಮ್ಮ ಪತ್ನಿ-ಮಕ್ಕಳಿಗೂ ಗೊತ್ತಾಗದ ರೀತಿಯಲ್ಲಿ ದಾನ ಹಾಗೂ ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಾರೆ. ಅವರ ಜೀವನದ ಆದರ್ಶಗಳನ್ನು ಜನರು ಮೈಗೂಡಿಸಿಕೊಳ್ಳಬೇಕೆಂದು ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದ್ದಾರೆ.

ಅಖಿಲ ಕರ್ನಾಟಕ ಸರ್ವಜ್ಞ ಸಾಂಸ್ಕೃತಿಕ ಕಲಾವೇದಿಕೆ ಹಾಗೂ ಹಿಂದುಳಿದ ಕುಂಬಾರರ ಸಂಘದ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ರತ್ನ ದಿ. ಪುನೀತ್ ರಾಜ್‌ಕುಮಾರ್ ನುಡಿ ನಮನ ಸಂಗೀತ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು.

ಪುನೀತ್ ಬದುಕಿದ್ದು 46 ವರ್ಷಗಳೇ ಆದರೂ, ಸಾವಿರಾರು ಜನರಿಗೆ ನೆರವಾಗಿದ್ದಾರೆ. ದಾನಶೂರ ಕರ್ಣನ ರೀತಿಯಲ್ಲಿ ಅವರು ಬಲಗೈಯಲ್ಲಿ ದಾನ ಮಾಡಿದ್ದು ಎಡಗೈಗೆ ಗೊತ್ತಾಗದಂತೆ ನೋಡಿಕೊಂಡಿದ್ದಾರೆ. ಅಂಥವರಿಗೆ ಸಾವಿಲ್ಲ. ದೇಹಕ್ಕೆ ಮಾತ್ರ ಸಾವಾಗಿದ್ದು, ಪುನೀತ್ ಅಜರಾಮರ ಎಂದು ಸ್ವಾಮೀಜಿ ಹೇಳಿದರು.

ಸಿದ್ದಗಂಗಾ ಶ್ರೀಗಳು ಲಿಂಗೈಕ್ಯರಾದ ನಂತರ ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರು ಸ್ವಯಂ ಪ್ರೇರಿತವಾಗಿ ಅಂತ್ಯಕ್ರಿಯೆಗೆ ಬಂದಿದ್ದು ಇದೇ ಮೊದಲು.

ಪುನೀತ್ ಅವರ ಬದುಕಿನಂತೆ ನಾವು ಒಂದಿಷ್ಟು ಒಳ್ಳೆಯ ಕಾರ್ಯ ಮಾಡುವುದು ಅವರಿಗೆ ಸಲ್ಲಿಸುವ ನಿಜವಾದ ಗೌರವ. ಕಣ್ಣುದಾನ, ಅಂಗದಾನ, ರಕ್ತದಾನದಂತಹ ಕಾರ್ಯಗಳಿಗೆ ಮುಂದಾಗಬೇಕು ಎಂದು ವಚನಾನಂದ ಶ್ರೀಗಳು ಕರೆ ನೀಡಿದರು.

ಶಾಸಕ ಹಾಗೂ ಲಿಡ್ಕರ್ ಅಧ್ಯಕ್ಷ ಪ್ರೊ. ಲಿಂಗಣ್ಣ ಮಾತನಾಡಿ, ನಟನೆ ಹಾಗೂ ಸೇವೆಯಲ್ಲಿ ಪುನೀತ್ ರಾಜ್‌ಕುಮಾರ್ ಅವರು ಹೆಸರು ಮಾಡಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಅವರ ಅಗಲಿಕೆ ನಾಡಿನ ಜನರಿಗೆ ದುಃಖ ತಂದಿದೆ. ಅವರ ಗೌರವಕ್ಕಾಗಿ ಕಣ್ಣು, ರಕ್ತದಾನ, ದೇಹ ದಾನದಂತಹ ಕಾರ್ಯಗಳನ್ನು ಆಯೋಜಿಸಿರುವುದು ಸ್ವಾಗತಾರ್ಹ ಎಂದರು.

ಚಿತ್ರದುರ್ಗದ ಬಳ್ಳೇಕಟ್ಟೆಯ ಕುಂಬಾರ ಗುರುಪೀಠದ ಶ್ರೀ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ರಕ್ತದಾನ, ನೇತ್ರದಾನ ಶಿಬಿರಗಳನ್ನು ಆಯೋಜಿಸಲಾಗಿತ್ತು.

(3ನೇ ಪುಟಕ್ಕೆ)



ದಾವಣಗೆರೆ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ರತ್ನ ದಿ. ಪುನೀತ್ ರಾಜ್‌ಕುಮಾರ್ ನುಡಿನಮನ ಸಂಗೀತ ಕಾರ್ಯಕ್ರಮದಲ್ಲಿ ಗಣ್ಯರು ಪುನೀತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

# ಕೃಷಿ ಕಾಯ್ದೆಗಳ ಮರು ಜಾರಿ ಇಲ್ಲ : ತೋಮರ್ ಸ್ಪಷ್ಟನೆ

ನವದೆಹಲಿ, ಡಿ. 26- ರದ್ದಾಗಿರುವ ಕೃಷಿ ಕಾಯ್ದೆಗಳನ್ನು ಮತ್ತೆ ಜಾರಿಗೆ ತರುವ ಯಾವುದೇ ಉದ್ದೇಶ ಸರ್ಕಾರಕ್ಕೆ ಇಲ್ಲ. ಕಾಂಗ್ರೆಸ್ ರೈತರಲ್ಲಿ ಈ ಬಗ್ಗೆ ಗೊಂದಲ ಸೃಷ್ಟಿಸುವ ಯತ್ನ ನಡೆಸಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ.

ರೈತರ ಕಲ್ಯಾಣಕ್ಕಾಗಿ ಕೃಷಿ ಕಾಯ್ದೆಗಳನ್ನು ಜಾರಿಗೆ ತರಲಾಗಿತ್ತು. ಆದರೆ, ದೆಹಲಿಯಲ್ಲಿ ನಡೆಸಲಾದ ಪ್ರತಿಭಟನೆಗಳ ಕಾರಣದಿಂದಾಗಿ ಕಾಯ್ದೆಗಳನ್ನು ವಾಪಸ್ ಪಡೆಯಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ನಿರ್ಧರಿಸಿದ್ದರು ಎಂದು ತೋಮರ್ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮಹಾರಾಷ್ಟ್ರದ

(2ನೇ ಪುಟಕ್ಕೆ)

# ಓಮಿಕ್ರಾನ್ ನಡುವೆಯೂ ಸಮಾವೇಶ

## ಮೋದಿ ಚುನಾವಣಾ ಸಮಾವೇಶಗಳಿಗೆ ಕಾಂಗ್ರೆಸ್ ತೀವ್ರ ತರಾಟೆ

ನವದೆಹಲಿ ಡಿ. 26- ಓಮಿಕ್ರಾನ್ ರೂಪಾಂತರಿ ಬೆದರಿಕೆಯನ್ನು ಸರ್ಕಾರ ಕಡೆಗಣಿಸುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಪ್ರಧಾನ ಮಂತ್ರಿ ನರೇಂದ್ರ ಮೋದಿ ಚುನಾವಣಾ ಸಮಾವೇಶಗಳನ್ನು ನಡೆಸುತ್ತಿರುವುದಕ್ಕೆ ಆಕ್ಷೇಪಿಸಿದೆ.

ಉತ್ತರ ಪ್ರದೇಶದಲ್ಲಿ ಮದುವೆಗಳಿಗೆ ಆಗಮಿಸುವ ಜನರ ಮೇಲೆ 200ರ ಮಿತಿ ಹೇರಲಾಗಿದೆ. ಆದರೆ, ಪ್ರಧಾನ ಮಂತ್ರಿ ಲಕ್ಷಾಂತರ ಜನರೊಂದಿಗೆ ಸಮಾವೇಶಗಳನ್ನು ನಡೆಸುತ್ತಿದ್ದಾರೆ ಎಂದು ಕಾಂಗ್ರೆಸ್ ಟೀಕಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 15ರಿಂದ 18 ವರ್ಷದ ಮಕ್ಕಳಿಗೆ ಕೊರೊನಾ ಲಸಿಕೆ ನೀಡುವುದಾಗಿ ಹೇಳಿರುವುದನ್ನು ಪ್ರಸ್ತಾಪಿಸಿರುವ ಕಾಂಗ್ರೆಸ್, 5ರಿಂದ 15 ವರ್ಷದ ಮಕ್ಕಳಿಗೆ ಲಸಿಕೆ ನೀಡುವ ಬಗ್ಗೆ ಸ್ಪಷ್ಟನೆ ನೀಡುವಂತೆ ಒತ್ತಾಯಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲ, ಕೊರೊನಾ ಸಮಯದಲ್ಲಿ ಸರ್ಕಾರ ಭಾರತವನ್ನು ವಿಫಲಗೊಳಿಸಿದೆ. ವಲಸೆ ಕಾರ್ಮಿಕರನ್ನು ಮೋದಿಯವರು ವಿಫಲಗೊಳಿಸಿದ್ದಾರೆ. ಎರಡನೇ ಅಲೆಯ ವೇಳೆ ಬಡವರಿಗೆ ಒಂದು ನಯಾ ಪೈಸೆ ಕೊಟ್ಟಿಲ್ಲ ಎಂದು ಆರೋಪಿಸಿದ್ದಾರೆ.

ಕೊರೊನಾ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಿಸದ ಕಾರಣ

(2ನೇ ಪುಟಕ್ಕೆ)

# ಸಂವಿಧಾನದ ಆಶಯದಡಿ ಕಾರ್ಯ ನಿರ್ವಹಿಸುವ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಬೇಕಿದೆ : ಎಸ್ಸೆಸ್



ದಾವಣಗೆರೆ, ಡಿ.26- ಭಾರತ ಸಂವಿಧಾನದ ಆಶಯ ಗಾಳಿಗೆ ತೂರಿ ಅಧಿಕಾರ ನಡೆಸುತ್ತಿರುವ ಬಿಜೆಪಿ ತೊಲಗಿಸಿ, ಕಾಂಗ್ರೆಸ್ ಪಕ್ಷವನ್ನು ದೇಶದಲ್ಲಿ ಆಡಳಿತಕ್ಕೆ ತರಲು ಸದಸ್ಯತ್ವ ನೋಂದಣಿ ಅಭಿಯಾನ ಮಹತ್ವದ ಕೆಲಸ ಮಾಡಲಿದೆ ಎಂದು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅಭಿಪ್ರಾಯ ಪಟ್ಟರು.

ಜಿಲ್ಲಾ ಮಹಿಳಾ ಕಾಂಗ್ರೆಸ್ ವತಿಯಿಂದ ಇಂದು ನಗರದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸದಸ್ಯತ್ವ ನೋಂದಣಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷ ಸಂವಿಧಾನದ ಆಶಯದಂತೆ ಎಲ್ಲಾ ವರ್ಗಗಳ ಹಿತ ಬಯಸಿ ಆಡಳಿತ ನಡೆಸಿತು. ಆದರೆ, ಬಿಜೆಪಿಗರು ಸುಳ್ಳು ಹೇಳಿ ಅಧಿಕಾರ ಪಡೆದುಕೊಂಡರೂ ಸಹ ಆಡಳಿತ ನಡೆಸುವಲ್ಲಿ ಸಂಪೂರ್ಣ ವಿಫಲತೆಯನ್ನು ಕಂಡಿದ್ದಾರೆ ಎಂದು ಅವರು ದೂರಿದರು.

ಜನ ವಿರೋಧಿ ನೀತಿ ಜಾರಿಗೆ ತರುತ್ತಿರುವ ಬಿಜೆಪಿಯನ್ನು ಅಧಿಕಾರದಿಂದ ದೂರವಿರಿಸಲು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು. ಅಧಿಕಾರಕ್ಕೆ ಬರಬೇಕಾದರೆ ಪಕ್ಷದ ಸದಸ್ಯತ್ವ ಪಡೆದವರು ಸ್ಥಳೀಯ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷದ ಸಾಧನೆಗಳನ್ನು ಮನೆ-ಮನೆಗೆ ತಲುಪಿಸಬೇಕು ಎಂದು ಕರೆ ನೀಡಿದರು.

ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್

(2ನೇ ಪುಟಕ್ಕೆ)

# ನ್ಯಾಯಮೂರ್ತಿಗಳ ನೇಮಕದಲ್ಲಿ ಹಲವರು ಭಾಗಿಯಾಗಿರುತ್ತಾರೆ

ಅಮರಾವತಿ, ಡಿ. 26 – ನ್ಯಾಯಮೂರ್ತಿಗಳೇ ನ್ಯಾಯಮೂರ್ತಿಗಳನ್ನು ನೇಮಿಸುತ್ತಾರೆ ಎಂಬುದು ಕಟ್ಟುಕಥೆ ಎಂದಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿ.ಜೆ.ಐ.) ಎನ್.ವಿ. ರಮಣ, ನ್ಯಾಯಮೂರ್ತಿಗಳ ನೇಮಕದಲ್ಲಿ ಹಲವರು ಭಾಗಿಯಾಗಿರುತ್ತಾರೆ ಎಂದಿದ್ದಾರೆ.

**ನ್ಯಾಯಮೂರ್ತಿಗಳೇ ನ್ಯಾಯಮೂರ್ತಿಗಳನ್ನು ನೇಮಿಸುವುದಿಲ್ಲ - ಸಿಜೆಐ ರಮಣ**

ವಿಜಯವಾಡದ ಕಾನೂನು ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರು, ನ್ಯಾಯಮೂರ್ತಿಗಳೇ ನ್ಯಾಯಮೂರ್ತಿಗಳನ್ನು ನೇಮಿಸುತ್ತಾರೆ ಎಂದು ಹೇಳುವುದು ಇತ್ತೀಚಿನ ಪ್ರವೃತ್ತಿಯಾಗಿದೆ. ಇದು ವ್ಯಾಪಕವಾಗಿ ಹರಡಿರುವ ಮಿಥ್ಯೆ. ನ್ಯಾಯಾಂಗ ನೇಮಕ ಪ್ರಕ್ರಿಯೆಯ ಒಂದು ಭಾಗ ಮಾತ್ರ ಎಂದಿದ್ದಾರೆ.

ಕೇಂದ್ರ ಕಾನೂನು ಸಚಿವಾಲಯ, ರಾಜ್ಯ ಸರ್ಕಾರ,

(3ನೇ ಪುಟಕ್ಕೆ)

# ನಗರದ ಹಿರಿಯ ಪತ್ರಕರ್ತ ಬಾ.ಮ. ಅವರಿಗೆ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಶಸ್ತಿ



ದಾವಣಗೆರೆ,ಡಿ.26- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಪ್ರತಿ ವರ್ಷವೂ ಹಿರಿಯ ಮತ್ತು ಪ್ರತಿಭಾನ್ವಿತ ಪತ್ರಕರ್ತರಿಗೆ ನೀಡುವ ರಾಜ್ಯ ಮಟ್ಟದ ಪ್ರಶಸ್ತಿಗೆ ನಗರದ ಹಿರಿಯ ಪತ್ರಕರ್ತರೂ, ಸಾಹಿತಿಗಳೂ ಆದ ಬಾ.ಮ. ಬಸವರಾಜಯ್ಯ ಭಾಜನರಾಗಿದ್ದಾರೆ.

ಶ್ರೀಮತಿ ಗಿರಿಜಮ್ಮ ರುದ್ರಪ್ಪ ತಾಳಿಕೋಟೆ ರಾಜ್ಯ ಪ್ರಶಸ್ತಿಗೆ ಬಾ.ಮ. ಅವರನ್ನು ಆಯ್ಕೆ ಮಾಡಲಾಗಿದೆ. ಜೊತೆಗೆ, 'ವಿಜಯ ಕರ್ನಾಟಕ'ದ ದಾವಣಗೆರೆ ಆವೃತ್ತಿಯಲ್ಲಿ ಡಿಸೈನರ್ ಎಸ್.ತಿಮ್ಮೇಶ್ ಅವರಿಗೂ ಪ್ರಶಸ್ತಿ ಲಭಿಸಿದೆ.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಶಿಫಾರಸ್ಸಿನಂತೆ ಈ ಪ್ರಶಸ್ತಿ ಘೋಷಿಸಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ

(3ನೇ ಪುಟಕ್ಕೆ)




ನಿಟುವಳ್ಳಿ ಗ್ರಾಮ ದೇವತೆಗಳಾದ
ಶ್ರೀ ದುರ್ಗಾಂಬಿಕಾ ದೇವಿ,
ಶ್ರೀ ಕರಿಯಾಂಬಿಕಾ ದೇವಿ
ಕಾರ್ತಿಕ ದೀಪೋತ್ಸವ
ದಿನಾಂಕ 28.12.2021ರ
ಮಂಗಳವಾರ ಸಂಜೆ 6 ಗಂಟೆಗೆ
ಸರ್ವ ಭಕ್ತಾದಿಗಳಿಗೆ ಸುಸ್ವಾಗತ...
ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್

**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ.
ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
**90601 72745**

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ ಅರ್ಧ ಪರ್ಸೆಂಟ್ ಕಮೀಷನ್‌ಗೆ ($^{1}/_{2}$%) ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕೆಲವೇ ದಿನಗಳು ಮಾತ್ರ.
ಕಿರಣ್ ಬೂಸ್ನೂರ್ : 98440-63409
ಷರತ್ತುಗಳು ಅನ್ವಯಿಸುತ್ತವೆ *

**ಸೈಟುಗಳು ಮಾರಾಟಕ್ಕಿವೆ-**
ಶಾಮನೂರು ಡಾಲರ್ಸ್ ಕಾಲೋನಿಯಲ್ಲಿ ಉತ್ತರ ಮುಖವಾಗಿರುವ 30×50, ದಕ್ಷಿಣ ಮುಖವಾಗಿರುವ 30×50 2 ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ
**94482 33389**

**ಮನೆ ಬಾಡಿಗೆಗೆ, ಲೀಸ್‌ಗೆ ಬೇಕೇ ? ಅಥವಾ ನಿಮ್ಮ ಮನೆ ಬಾಡಿಗೆಗೆ, ಲೀಸ್‌ಗೆ ಇದೆಯೇ ? ತಿಳಿಸಿ, ನಾವು ಕೊಡಿಸುತ್ತೇವೆ.**
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409

ಅಪಾರ್ಟ್‌ಮೆಂಟ್‌ನಲ್ಲಿ ಮನೆಗಳು ಮಾರಾಟಕ್ಕಿವೆ. Three B.Room SS B' Block ನಲ್ಲಿ 75 ಲಕ್ಷಕ್ಕೆ. Two B.Room ಮನೆ ಸಿದ್ದವೀರಪ್ಪ ಬಡಾವಣೆಯಲ್ಲಿ 55 ಲಕ್ಷಕ್ಕೆ
ಐನಳ್ಳಿ ದೈವೀಕ್ ಏಜೆಂಟ್
**99456 43223**

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
**94838 62779**

**ಸೈಟುಗಳು ಮಾರಾಟಕ್ಕಿವೆ**
20×30 East J.H Patel ಬಡಾವಣೆಯಲ್ಲಿ, 30×50 North ಡಾಲರ್ಸ್ ಕಾಲೋನಿ ಹತ್ತಿರ Rate 2500/-, 30×63 Corner ಡಾಲರ್ಸ್ ಕಾಲೋನಿಯಲ್ಲಿ, 30×40 Weast 40 ಅಡಿ ರೋಡಿಗಿದೆ. ಬನಶಂಕರಿ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಮನೆ ಮಾರಾಟಕ್ಕಿದೆ**
30X40, 3 FLOOR ವುಳ್ಳ ಬಿಲ್ಡಿಂಗ್ ಮಾರಾಟಕ್ಕಿದೆ. ಭಗತ್ ಸಿಂಗ್ ನಗರ, 1ನೇ ಮೇನ್, 3ನೇ ಕ್ರಾಸ್, ದಾವಣಗೆರೆ.
**94487 28830**
**96062 83328**

ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ. 40×60 South, 40×60 West, 40×60 East 40 ಅಡಿ ರೋಡಿಗಿದೆ. 40×60 South 80 ಅಡಿ ರೋಡಿಗಿದೆ, 30×40 West, 30×50 East
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್
**94489 21346**
**82177 72482**

**ತಕ್ಷಣ ಬೇಕಾಗಿದ್ದಾರೆ**
ಹೌಸ್ ಕೀಪಿಂಗ್ ಕೆಲಸಕ್ಕೆ ಬಾತ್‌ರೂಂ ಕ್ಲೀನ್ ಮಾಡುವುದಕ್ಕೆ ಹೌಸ್ ಮನ್ ಬೇಕಾಗಿದ್ದಾರೆ. ಸಂಪರ್ಕಿಸಿ:
98867 72303, 98806 65959
93809 74740, 88616 46355

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಮನೆ ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ನಗರ ಉತ್ತರ ದಿಕ್ಕಿನ 2 ಬೆಡ್ ರೂಮ್, ಬೋರ್‌ವೆಲ್ ನೀರು ವ್ಯವಸ್ಥೆ ಇರುವ 30x40ರ ಮನೆ, 20x30 ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
83173 63203, 94482 33389

**ಶಿಕ್ಷಕಿಯರು ಬೇಕಾಗಿದ್ದಾರೆ**
BA, B.Com, B.Sc ಹಾಗೂ PUC, NTC ತರಬೇತಿ ಹೊಂದಿದ ಶಿಕ್ಷಕಿಯರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ, ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ. ಸಂಪರ್ಕಿಸಿ :
**99640 17729**


# ಹದಡಿಯಲ್ಲಿ ಇಂದು - ನಾಳೆ ಬೀರಲಿಂಗೇಶ್ವರ ಕಾರ್ತಿಕೋತ್ಸವ

ದಾವಣಗೆರೆ ತಾಲ್ಲೂಕು ಹದಡಿ ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕೋತ್ಸವ, ಮುಳ್ಳು ಗದ್ದಿಗೆ ಜಾತ್ರೆ, ಕೆಂಡದಾರ್ಚನೆ ಜಾತ್ರಾ ಮಹೋತ್ಸವ ಇಂದು - ನಾಳೆ ಜರುಗಲಿದೆ.

ಇಂದು ಬೆಳಿಗ್ಗೆ ವೀರಗಾಸೆಯವರಿಂದ ಶಸ್ತ್ರ ಪವಾಡಗಳು, ಬೀರಲಿಂಗೇಶ್ವರ ದೇವರಿಗೆ ಎಡೆ ಸಮರ್ಪಣೆ, ಮಹಾಮಂಗಳಾರತಿ, ದೀಡು ನಮಸ್ಕಾರ, ಉರುಳು ಸೇವೆ.

ನಾಳೆ ಮಂಗಳವಾರ ಬೆಳಿಗ್ಗೆ ಬೀರಲಿಂಗೇಶ್ವರ ದೇವರು ಮಠದ ನಂದೀಶ್ವರ ಸ್ವಾಮಿಗಳ ಸಮ್ಮುಖದಲ್ಲಿ ನಿಂಬಳೇರ ರವಿ ಅವರ ಹಸ್ತದಿಂದ ಜ್ಯೋತಿ ಪಡೆದು, ಕೆಂಡದ ಗದ್ದಿಗೆಗೆ ಜ್ಯೋತಿ ಹಚ್ಚುವುದು. ಮಧ್ಯಾಹ್ನ 2 ಗಂಟೆಗೆ ಬೀರಲಿಂಗೇಶ್ವರ ದೇವರು, ಆಂಜನೇಯ ದೇವರು, ದಂಡಿ ದುರುಗಮ್ಮ ದೇವಿ, ಮಸಿಯಾಂಬಿಕಾ ದೇವಿ, ಹೊರಟ್ಟಿ ದುರುಗಮ್ಮ ದೇವರುಗಳ ಹೊಳೆ ಪೂಜೆ, ವಿಭೂತಿ ಧಾರಣೆ, ಕಂಕಣ ಕಟ್ಟಿ ಪೂಜೆ, ಮುಳ್ಳುಗದ್ದಿಗೆ ಹರಣ, ದೇವರುಗಳ ಮೆರವಣಿಗೆ ನಡೆದು, ಕೆಂಡ ದಾರ್ಚನೆ ಜರುಗುವುದು. ನಂತರ ಪ್ರಸಾದ ವ್ಯವಸ್ಥೆ ಏರ್ಪಾಡಾಗಿದೆ.

# ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಿದೆ : ಎಸ್ಸೆಸ್



**(1ನೇ ಪುಟದಿಂದ)** ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಜಿಲ್ಲಾ ವಕ್ತಾರರಾದ ನಾಗರತ್ನಮ್ಮ ಎಸ್. ಮಲ್ಲಿಕಾರ್ಜುನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಕೊಡಪಾನ ದಾದಾಪೀರ್, ಮಹಿಳಾ ಕಾಂಗ್ರೆಸ್‌ನ ಶುಭಮಂಗಳ, ರಾಜೇಶ್ವರಿ, ನಾಗರತ್ನಮ್ಮ, ಆಶಾ ಮುರುಳಿ, ಮಂಗಳಮ್ಮ ಗೀತಾ ಪ್ರಶಾಂತ್, ಗೀತಾ ಚಂದ್ರಶೇಖರ್, ದ್ರಾಕ್ಷಾಯಣಮ್ಮ ಅನ್ನಪೂರ್ಣಮ್ಮ ಸುನೀತಾ ಭೀಮಣ್ಣ, ರುದ್ರಮ್ಮ ಸಲ್ಮಾ ಮತ್ತಿತರರಿದ್ದರು.

## 1 ರಂದು ಅಮರಶಿಲ್ಪಿ ಜಕಣಾಚಾರಿ ಜಯಂತಿ

ದಾವಣಗೆರೆ, ಡಿ. 26- ಅಖಿಲ ಭಾರತ ವಿಶ್ವಕರ್ಮ ಪರಿಷತ್ ವತಿಯಿಂದ ಜ. 1 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಾಗೂ ಕಾಳಿಕಾದೇವಿ ಕಲ್ಯಾಣ ಮಂಟಪದಲ್ಲಿ ಅಮರಶಿಲ್ಪಿ ಜಕಣಾಚಾರಿ ಜಯಂತಿಯನ್ನು ಆಚರಿಸಲಾಗುವುದು ಎಂದು ಪರಿಷತ್ ಅಧ್ಯಕ್ಷ ಎಂ.ಈ. ಮೌನೇಶ್ವರಚಾರಿ ತಿಳಿಸಿದ್ದಾರೆ.

# ಸೀತಾ ಶಂಕರನಾರಾಯಣರ 'ನಾ ಕಂಡ ನಾಡಗುಡಿ-ಗೋಪುರಗಳು' ಪುಸ್ತಕ ಬಿಡುಗಡೆ



**ಹರಿಹರದಲ್ಲಿ ಇಂದು**

ಹರಿಹರ,ಡಿ.26- ಶ್ರೀಮತಿ ಸೀತಾ ಶಂಕರನಾರಾಯಣ ರವರು ಚಿಂತನ ಪ್ರತಿಷ್ಠಾನದಿಂದ 'ನಾ ಕಂಡ ನಾಡಗುಡಿ-ಗೋಪುರಗಳು' ಪುಸ್ತಕ ಬಿಡುಗಡೆ ಸಮಾರಂಭವು ನಗರದ ಯಂತ್ರಪುರದ ಹಂಸಾಗರ್ ಕಾಂಪೌಂಡ್ ಸುಕೃತಿಯಲ್ಲಿ ನಾಳೆ ದಿನಾಂಕ 27ರ ಸೋಮವಾರ ಬೆಳಿಗ್ಗೆ 10-30ಕ್ಕೆ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ವಹಿಸಲಿದ್ದಾರೆ. ಸಾಹಿತಿ ಪ್ರೊ. ಸಿ.ವಿ. ಪಾಟೀಲ್ ಪುಸ್ತಕ ಕುರಿತು ಮಾತನಾಡುವರು. ಚಿಂತನ ಪ್ರತಿಷ್ಠಾನದ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಬಿ.ಪಿ. ಹರೀಶ್, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮ ನಾಗರಾಜ್, ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀಮತಿ ವೀಣಾ ಕೃಷ್ಣಮೂರ್ತಿ ಅವರುಗಳು ಆಗಮಿಸಲಿದ್ದಾರೆ. ಡಾ. ಡಿ. ಫ್ರಾನ್ಸಿಸ್ ಕ್ಸೇವಿಯರ್ ಕಾರ್ಯಕ್ರಮ ನಿರೂಪಿಸುವರು.

## ಕಾಯ್ದೆಗಳ ಮರು ಜಾರಿ ಇಲ್ಲ

**(1ನೇ ಪುಟದಿಂದ)** ನಾಗಪುರದಲ್ಲಿ ನಾನು ನೀಡಿದ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ. ಕೃಷಿ ಕಾಯ್ದೆಗಳ ವಿಷಯದಲ್ಲಿ ನಾವು ಒಂದು ಹೆಜ್ಜೆ ಹಿಂದೆ ಇಟ್ಟಿದ್ದೇವೆ. ಆದರೆ, ರೈತರ ಹಿತಕ್ಕಾಗಿ ಕಾರ್ಯ ನಿರ್ವಹಿಸುವುದನ್ನು ನಾವು ಮುಂದುವರೆಸುತ್ತೇವೆ ಎಂದು ಅಲ್ಲಿ ತಿಳಿಸಿದ್ದೆ ಎಂದು ತೋಮರ್ ಹೇಳಿದ್ದಾರೆ. ಕೃಷಿ ಕಾಯ್ದೆಗಳ ವಿಷಯದಲ್ಲಿ ಯಾವುದೇ ತಪ್ಪು ಅಭಿಪ್ರಾಯ ಇರಬಾರದು. ಕೃಷಿ ಕಾಯ್ದೆಗಳನ್ನು ಮತ್ತೆ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿಲ್ಲ ಎಂದವರು ತಿಳಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿಂದು ಮಾಚಿದೇವರ ಕಾರ್ತಿಕ

ಶ್ರೀ ಮಾಚಿದೇವರ ದೇವಸ್ಥಾನದಲ್ಲಿ ಇಂದು ಸಂಜೆ 6.30 ಕ್ಕೆ ಕಾಯಕ ಯೋಗಿ ಶ್ರೀ ಮಡಿವಾಳ ಮಾಚಿದೇವರ ಕಾರ್ತಿಕ ಮಹೋತ್ಸವ ನಡೆಯಲಿದೆ.ಬೆಳಿಗ್ಗೆ ಅಭಿಷೇಕ, ಹೋಮ, ಹವನ, ಪೂಜಾಲಂಕಾರ, ಮಂಗಳಾರತಿಯೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

## ಮನಸ್ಸಿಗೆ ಶಾಂತಿ

**(1ನೇ ಪುಟದಿಂದ)** ದೇಶದಲ್ಲಿ ಶರಣರು, ಸಂತರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಮಾನವ ರೂಪದಲ್ಲಿ ಜನಿಸಿ ಭೂಮಿಗೆ ಬಂದು ಜನರನ್ನು ಶಾಂತಿ ಮಾರ್ಗದಲ್ಲಿ ನಡೆಯುವಂತೆ ಮಾಡಿದರು ಏಸು ಕ್ರಿಸ್ತ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಅಣಬೂರು ಕೊಟ್ರೇಶ್, ತಾಲ್ಲೂಕು ಸಂಘದ ಅಧ್ಯಕ್ಷ ಚಿದಾನಂದ, ಕರವೇ ಅಧ್ಯಕ್ಷ ಮಹಾಂತೇಶ್, ಭೀಮಾ ಸೇನೆಯ ಜಿಲ್ಲಾಧ್ಯಕ್ಷ ಧನ್ಯಕುಮಾರ್, ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ, ಡಿಎಸ್‌ಎಸ್ ಸಂಚಾಲಕ ಸತೀಶ್, ತಾಲ್ಲೂಕು ಆಶಾ ಕಾರ್ಯಕರ್ತೆಯರ ಅಧ್ಯಕ್ಷೆ ಮಾರಕ್ಕ, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಅರವಿಂದ, ಧರ್ಮಸ್ಥಳ ಗ್ರಾ. ಯೋಜನೆಯ ತಾಲ್ಲೂಕು ಸಂಚಾಲಕ ಜನಾರ್ದನ ಮುಂತಾದವರು ಹಾಜರಿದ್ದರು.

## ಯಕ್ಕನಹಳ್ಳಿಯಲ್ಲಿ ಭತ್ತದ ಬಣವೆಗೆ ಬೆಂಕಿ

ಹೊನ್ನಾಳಿ, ಡಿ.26- ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದ ತಳವಾರಹಟ್ಟಿಯಲ್ಲಿ ಈರಣ್ಣ ಎಂಬುವವರಿಗೆ ಸೇರಿದ ಭತ್ತದ ಹುಲ್ಲಿನ ಬಣವೆಗೆ ಶುಕ್ರವಾರ ಆಕಸ್ಮಿಕ ಬೆಂಕಿ ಬಿದ್ದ ವೇಳೆ ಗ್ರಾಮಸ್ಥರು ಒಟ್ಟಾಗಿ ಶ್ರಮವಹಿಸಿ ನಂದಿಸಿದರು.

# ಹರನಪನಹಳ್ಳಿಯಲ್ಲಿ ಇಂದು ಶ್ರೀ ಗುರು ಕೆಂಪೇಶ್ವರ ಸ್ವಾಮಿಯ ಕಾರ್ತಿಕೋತ್ಸವ



ಹರಪನಹಳ್ಳಿ ಪಟ್ಟಣದ ಶ್ರೀ ಗುರು ಕೆಂಪೇಶ್ವರ ಸ್ವಾಮಿಯ ಕಾರ್ತಿಕೋತ್ಸವ ವು ಇಂದು ಬೆಳಿಗ್ಗೆ 6.30ಕ್ಕೆ ರುದ್ರಾಭಿಷೇಕ ದೀಪೋತ್ಸವ ಮೂಲಕ ಜರುಗಲಿದೆ ಎಂದು ಶ್ರೀ ಗುರು ಕೆಂಪೇಶ್ವರ ಸ್ವಾಮಿ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಎಂ.ರಾಜಶೇಖರ್, ಕಾರ್ಯದರ್ಶಿ ಪಾಟೀಲ್ ಬೆಟ್ಟನ ಗೌಡ್ರು, ಖಜಾಂಚಿ ಹುಳ್ಳಿ ಕೊಟ್ರೇಶಪ್ಪ ತಿಳಿಸಿದ್ದಾರೆ.

## ದೀಟೂರಿನಲ್ಲಿ ಇಂದು ಮಹೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ

ಹರಿಹರ ತಾಲ್ಲೂಕಿನ ದೀಟೂರು ಗ್ರಾಮದ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆ ಇಂದು ನಡೆಯಲಿದೆ.

ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶೀ ಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯದಲ್ಲಿ ಇಂದು ಬೆಳಿಗ್ಗೆ 8.30 ಕ್ಕೆ ಶ್ರೀ ಮಹೇಶ್ವರ ಸ್ವಾಮಿಯ ಕಾರ್ತಿಕೋತ್ಸವದ ಗದ್ದುಗೆಯ ಗೋಪುರದ ಕಳಸಾರೋಹಣ ನಡೆಯಲಿದೆ. ಬೆಳಿಗ್ಗೆ 9 ರಿಂದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮತ್ತು ಶ್ರೀ ಮಹೇಶ್ವರ ಸ್ವಾಮಿ ಕಾರ್ತಿಕೋತ್ಸವ ನಡೆಯುವುದು.

ನಾಳೆ ಮಂಗಳವಾರ ತುಂಗಭದ್ರಾ ನದಿಯಲ್ಲಿರುವ ಭವ್ಯ ಮಂಟಪದಲ್ಲಿ ಮಹೇಶ್ವರ ಸ್ವಾಮಿ ಮಹಾಪೂಜೆ, ನಂತರ ಪ್ರಸಾದ ವಿನಿಯೋಗ. ಸಂಜೆ 6.30 ಕ್ಕೆ ಗ್ರಾಮದೇವತೆಗಳ ಕಾರ್ತಿಕೋತ್ಸವ ನಡೆಯುವುದು.

ದಿನಾಂಕ 29 ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಶ್ರೀ ಮಹೇಶ್ವರ ಸ್ವಾಮಿ ಪಲ್ಲಕ್ಕಿ ಮಹೋತ್ಸವ ನಡೆಯುವುದು. ನಂತರ ರಾತ್ರಿ 10 ಗಂಟೆಗೆ ಮನರಂಜನಾ ಕಾರ್ಯಕ್ರಮ ನಡೆಯುವುದು.

## ಓಮಿಕ್ರಾನ್ ನಡುವೆಯೂ ಸಮಾವೇಶ

**(1ನೇ ಪುಟದಿಂದ)** ಸುಮಾರು 40 ಲಕ್ಷ ಭಾರತೀಯರು ಸಾವನ್ನಪ್ಪಿದ್ದಾರೆ ಎಂಬ ಸಮೀಕ್ಷೆಯೊಂದನ್ನು ಸುರ್ಜೇವಾಲ ಉದಾಹರಿಸಿದ್ದಾರೆ. ಓಮಿಕ್ರಾನ್ ಹರಡುತ್ತಿದ್ದರೂ ಸಹ ಸರ್ಕಾರ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ಎಲ್ಲ ಹೊಣೆಯನ್ನು ರಾಜ್ಯಗಳ ಮೇಲೆ ಹಾಕಿ, ಪ್ರಧಾನಿ ಜವಾಬ್ದಾರಿಗಳಿಂದ ನುಣುಚಿಕೊಳ್ಳುತ್ತಿದ್ದಾರೆ ಎಂದು ಸುರ್ಜೇವಾಲ ಆರೋಪಿಸಿದ್ದಾರೆ.


**PAINTING & POLISH WORK (TURNKEY)**
Contact
Ph : 98452 32516

**Commercial Building For Rent**
Three Floor Commercial Building Situated at K.R Road (Near Shanthi Talkies) suitable for Nursing Homes/ Hospitals is availabele for rent.
Contact : 98800 64464

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಚೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ಮೊ : 81339 33804

**Required**
PRO's for reputed PU Science college in Davangere
**89702 25551**

**Joint Venture Building**
ದಾವಣಗೆರೆ ನಗರದ ಆಯ್ದ ಬಡಾವಣೆಗಳ ಖಾಲಿ ನಿವೇಶನಗಳಲ್ಲಿ 30×40, 40×60 ಜಾಯಿಂಟ್ ವೆಂಚರ್ ಮೇರೆಗೆ ಮನೆಗಳನ್ನು ನಿರ್ಮಿಸಿ ಕೊಡಲಾಗುವುದು.
ಸಂಪರ್ಕಿಸಿರಿ: ಹೊನ್ನೂರುಸ್ವಾಮಿ ವಾಂಜ್ರೆ
87926 04196

**ಮಾರಾಟಕ್ಕಿದೆ**
ಕಂಪ್ಯೂಟರ್ ಮಾರಾಟಕ್ಕಿದೆ
ಸಂಪರ್ಕಿಸಿ
**88614 38237**


# ಪಿ.ಎಸ್. ವೆಂಕಟೇಶಮೂರ್ತಿ ನಿಧನ



ದಾವಣಗೆರೆ ಎಂ.ಸಿ.ಸಿ.ಎ ಬ್ಲಾಕ್, 9ನೇ ಮೇನ್, ಗುರುಶಾಂತ ಆಶ್ರಮ ರಸ್ತೆ ವಾಸಿ, ಧನಲಕ್ಷ್ಮಿ ಸ್ಟೋರ್ ಮಾಲೀಕರು, ದಿ|| ಪಳುವಳ್ಳಿ ಶ್ರೀನಿವಾಸ ಶ್ರೇಷ್ಠಿ ಇವರ ಜೇಷ್ಠ ಪುತ್ರ

**ಶ್ರೀ ಪಿ.ಎಸ್. ವೆಂಕಟೇಶಮೂರ್ತಿ**

ಅವರು ದಿ : 26-12-21ರ ಭಾನುವಾರ ರಾತ್ರಿ 8-30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 75 ವರ್ಷ ವಯಸ್ಸಾಗಿತ್ತು.
ಶ್ರೀಯುತರು ವಾಸವಿ ಸೀಡ್ ಸೆಂಟರ್ ಮಾಲೀಕರಾದ ಶ್ರೀ ಲಕ್ಷ್ಮೀನಾರಾಯಣ ಶೆಟ್ರು ಹಾಗೂ ವಾಸವಿ ಸ್ಟೋರ್ಸ್ ಮಾಲೀಕರಾದ ಶ್ರೀ ರಾಧಾಕೃಷ್ಣ ಶೆಟ್ರು ಇವರ ಹಿರಿಯ ಸಹೋದರರಾಗಿರುತ್ತಾರೆ.
ಮೃತರು ತಾಯಿ, ಪತ್ನಿ, 7 ಜನ ಸಹೋದರರು, 4 ಜನ ಸಹೋದರಿಯರು, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಶ್ರೀಯುತರ ಅಂತ್ಯಕ್ರಿಯೆಯು ದಿ: 27-12-21ರ ಸೋಮವಾರ ಬೆಳಿಗ್ಗೆ 11-30ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನಡೆಯಲಿದೆ.

-ಇಂತಿ ದು:ಖತಪ್ತ ಕುಟುಂಬ ವರ್ಗ

ಮೊ : 9844063352


**ಬೇಕಾಗಿದ್ದಾರೆ**
ಮನೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಎಸ್.ಎಸ್. ಲೇಔಟ್
ಸಂಪರ್ಕಿಸಿ: 96204 66757
Spinal cord injury Patient ಗೆ ಕೇರ್ ಟೇಕರ್/ ವ್ಯಾಯಾಮ ಮಾಡಿಸುವವರು ಬೇಕಾಗಿದ್ದಾರೆ.
ಸಂಪರ್ಕಿಸಿ: 93417 77567

**WANTED**
3 BHK house for Rent
3 BHK Independent House with Parking & Borewell facility. S.S layout, Siddaveerappa layout, P.J.Extension, MCC A' Block, B' Block, Kuvempu Nagar, Vidyanagar, Taralabalu badavane preferable.
Contact : 94481 10895

ಪಿತ್ರಾರ್ಜಿತ / ಕುಟುಂಬದ ಆಸ್ತಿ
ನಿಮ್ಮ ಕುಟುಂಬದ ಪೂರ್ವಜರ ಮತ್ತು ಒಟ್ಟು ಕುಟುಂಬದ ಆಸ್ತಿಗಳಿಂದ ನಿಮಗೆ ಬರಬೇಕಾಗಿರತಕ್ಕ ಪಾಲಿನ ಭಾಗ ಪಡೆಯಲು ಸಂಪರ್ಕಿಸಿರಿ
ಹೊನ್ನೂರಸ್ವಾಮಿ ವಾಂಜ್ರೆ
87926 04196

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಲಿಂಗಾಯಿತ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ
**91108 98377**


## ಹತ್ತನೇ ವರ್ಷದ ಪುಣ್ಯಸ್ಮರಣೆ



ದಿ|| ಹೆಚ್.ಎಸ್. ರುದ್ರೇಶ್ವರ B.E.

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿ ಇರುವ,
ಶ್ರೀಮತಿ ರತ್ನಮ್ಮ ಶ್ರೀ ಕೆ.ಎಂ. ಶ್ರೀಕಂಠಯ್ಯ, ನಿವೃತ್ತ ಮುಖ್ಯ ಶಿಕ್ಷಕರು,
ಶ್ರೀಮತಿ ವೀರಮ್ಮ ಮತ್ತು ಮಕ್ಕಳು, ಕಂದಗಲ್ಲು, ದಾವಣಗೆರೆ ತಾಲ್ಲೂಕು.
ಅಳಿಯಂದಿರು ಹಾಗೂ ಬಂಧುಗಳು-ಮಿತ್ರರು.
ಶ್ರೀಮತಿ ಕೆ.ಎಸ್. ಸುಧಾ, ಶ್ರೀ ಟಿ.ಸಿ. ಬಸವರಾಜಯ್ಯ, ಮಹಾನಗರ ಪಾಲಿಕೆ, ದಾವಣಗೆರೆ.
ಶ್ರೀಮತಿ ಮುಕ್ತ ಶ್ರೀ ಹೆಚ್.ಎಸ್. ಲೋಕೇಶ್
ಚಿ|| ಹೆಚ್.ಎಲ್. ಪ್ರಣವ್, ಚಿ|| ಹೆಚ್.ಎಲ್. ಹರ್ಷ, ಕು|| ಸಿ.ಬಿ. ಮೇಘನ, ಚಿ|| ಮನೋಜ್


**WANTED**
Ladies for Office work
Age limit: 22 years, Qul : SSLC
Preferably Davangere old city candidates.
Attractive salary
Contact with Bio-data
Jain Enterprises
Chowkipet Chigateri Galli, Back said to old BSC., Opp. Axis Bank, Davangere-01
98445 55551
98445 09222

**WANTED**
Receptionist
English and Hindi Knowledge is must.
Contact
'Apoorva Resort'
94481 14684


## ಕುಣಿಬೆಳಕೆರೆ ಗ್ರಾಮದ ಗೋಣೆಪ್ಪ ಕನ್ನಮ್ಮ ನಿಧನ



ಹರಿಹರ ತಾಲ್ಲೂಕು ಕುಣಿಬೆಳಕೆರೆ ಗ್ರಾಮದ ವಾಸಿ ದಿ. ಗೋಣೆಪ್ಪ ಚನ್ನಬಸಪ್ಪನವರ ಧರ್ಮಪತ್ನಿ ಹಾಗೂ ಎಪಿಎಂಸಿ ಹಾಗೂ ಗ್ರಾ.ಪಂ. ಮಾಜಿ ಸದಸ್ಯರಾದ ಜಿ.ಸಿ. ರುದ್ರಪ್ಪ ಅವರ ತಾಯಿ


**ಶ್ರೀಮತಿ ಕನ್ನಮ್ಮ** (90 ವರ್ಷ)

ಇವರು ದಿನಾಂಕ 26.12.2021ರ ಭಾನುವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.12.2021ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಕುಣಿಬೆಳಕೆರೆಯಲ್ಲಿ ನೆರವೇರಲಿದೆ.


**GST Registration, Income-Tax & GST Cases, NGO**
ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, Trust Registration, Project Report, Audit & For Account Maintenances.
Please Contact
MEGHANA ASSOCIATES ®
P.J.Extension, Davanagere.
Mob: 99809 16126

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


## ಶತಾಯುಷಿ ಬಸಾಪುರದ ಶಿವಪ್ಪರ ಸಿದ್ದಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಸಾಪುರ ಗ್ರಾಮದ ವಾಸಿ

**ಶತಾಯುಷಿ ಶಿವಪ್ಪರ ಸಿದ್ದಪ್ಪ**

ಇವರು ದಿನಾಂಕ 26.12.2021ರ ಭಾನುವಾರ ಮಧ್ಯಾಹ್ನ 1.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 100 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.12.2021ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಸ್ವಗ್ರಾಮ ಬಸಾಪುರದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

## ಶತಾಯುಷಿ ಶ್ರೀಮತಿ ಮುರಿಗೆಮ್ಮ ನಿಧನ



ದಾವಣಗೆರೆ ಹಳೇ ಕುಂದುವಾಡ ವಾಸಿ ದಿ. ಹಂಚಿನಮನೆ ಭೀಮಪ್ಪನವರ ಧರ್ಮಪತ್ನಿ

**ಶ್ರೀಮತಿ ಮುರಿಗೆಮ್ಮನವರು**

ದಿನಾಂಕ 26.12.2021 ರ ಭಾನುವಾರ ರಾತ್ರಿ 10.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 100 ವರ್ಷ ವಯಸ್ಸಾಗಿತ್ತು. ಮೃತರು ನಾಲ್ವರು ಪುತ್ರರು, ನಾಲ್ವರು ಪುತ್ರಿಯರನ್ನು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.12.2021 ರ ಸೋಮವಾರ ಮಧ್ಯಾಹ್ನ 12.00 ಗಂಟೆಗೆ ಹಳೇ ಕುಂದುವಾಡದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು :

**ಮಕ್ಕಳು, ಮೊಮ್ಮಕ್ಕಳು ಹಾಗೂ ಹಂಚಿನಮನೆ ವಂಶಸ್ಥರು**

## ಪಾಲಿಕೆಯ ರಾಜ್ಯೋತ್ಸವ ಗೌರವಕ್ಕೆ ಕರಿಬಸಮ್ಮ ಅವರನ್ನು ಆಯ್ಕೆ ಮಾಡಿ



ದಾವಣಗೆರೆ, ಡಿ.26- ಮಹಾನಗರ ಪಾಲಿಕೆ ವತಿಯಿಂದ ನಾಡಿದ್ದು ದಿನಾಂಕ 28ರಂದು ನಡೆ ಯುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ಕೊಡಮಾಡುವ ರಾಜ್ಯೋತ್ಸವ ಗೌರವ ಸನ್ಮಾನಕ್ಕೆ ದಯಾಮರಣ ಹೋರಾಟ ಗಾರ್ತಿ, ಸಮಾಜ ಸೇವಕಿ, ನಿವೃತ್ತ ಶಿಕ್ಷಕರಾದ ಶ್ರೀಮತಿ ಹೆಚ್.ಬಿ. ಕರಿಬಸಮ್ಮ ಅವರನ್ನು ಆಯ್ಕೆ ಮಾಡುವಂತೆ ರಂಗ ನಿರ್ದೇಶಕ ಮಂಜುನಾಥ ಹೊಳೆಸಿರಿಗೆರೆ ಮನವಿ ಮಾಡಿದ್ದಾರೆ.

ಸಮಾಜಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ, ವೃದ್ಧಾಶ್ರಮದ ವಯೋವೃದ್ಧರಿಗೆ ಪ್ರತಿ ವರ್ಷ ಅನ್ನ ಸಂತರ್ಪಣೆ ಮಾಡುತ್ತಿರುವ ಮತ್ತು ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಲಕ್ಷಾಂತರ ರೂ.ಗಳನ್ನು ರಾಜ್ಯ ಸರ್ಕಾರಕ್ಕೆ ನೀಡುವ ಮೂಲಕ ಬಡಜನರ ಕಷ್ಟಕ್ಕೆ ನೆರವಾಗಿದ್ದಾರೆ ಎಂದು ಮಂಜುನಾಥ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಮಲ್ಲಿಕಾರ್ಜುನ, ಕಂಠಿ ದುರ್ಗಮ್ಮ ಕಡೇ ಕಾರ್ತಿಕ

ಕೆ.ಟಿ.ಜೆ. ನಗರದ 10ನೇ ತಿರುವಿನಲ್ಲಿರುವ ಶ್ರೀ ಮಲ್ಲಿಕಾರ್ಜುನಸ್ವಾಮಿ ಕಡೇ ಕಾರ್ತಿಕೋತ್ಸವ ಇಂದು ಸಂಜೆ 7.30 ಕ್ಕೆ ನಡೆಯಲಿದೆ. ನಾಳೆ ಮಂಗಳವಾರ ಸಂಜೆ 7.30 ಕ್ಕೆ ಶ್ರೀ ಕಂಠಿದುರ್ಗಮ್ಮ ದೇವಸ್ಥಾನದ ಕಡೇ ಕಾರ್ತಿಕೋತ್ಸವ ನಡೆಯಲಿದೆ ಎಂದು ಕೆ.ಟಿ.ಜೆ. ನಗರದ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕೆ.ಪಿ.ಸಿ.ಸಿ. ಎಸ್ಸಿ ವಿಭಾಗದ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ತಿಳಿಸಿದ್ದಾರೆ.

# ಓದುವ ವಯಸ್ಸಿನಲ್ಲಿ ಪ್ರೀತಿ - ಪ್ರೇಮ ಬೇಡ

### ವಿದ್ಯಾರ್ಥಿಗಳಲ್ಲಿ ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯ ಇನಾಯತ್ ಕಳಕಳಿ




ದಾವಣಗೆರೆ, ಡಿ.26- ಪ್ರೀತಿ, ಪ್ರೇಮದ ಗುಂಗು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಅಡ್ಡಿಯನ್ನುಂಟು ಮಾಡುತ್ತದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಇನಾಯತ್ ಉಲ್ಲಾ ಟಿ. ಹೇಳಿದರು.

ನಗರದ ಅಂಜುಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದೆಸೆಯಲ್ಲಿ ಚಿತ್ತ ಓದಿನತ್ತ ಮಾತ್ರ ಇರಬೇಕು. ಏಕಚಿತ್ತದಿಂದ ಶ್ರಮವಹಿಸುವ ವಿದ್ಯಾರ್ಥಿಗಳು ಸಹಜವಾಗಿ ಉತ್ತಮ ಸಾಧನೆ ಮಾಡುತ್ತಾರೆಂದರು.

ಯುವ ಮನಸ್ಸುಗಳು ಪರಸ್ಪರ ಆಕರ್ಷಿತವಾಗುವುದು ಸಹಜ. ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ಇಷ್ಟವಾದರೆ ಶಿಕ್ಷಣ ಪೂರ್ಣಗೊಳಿಸಿ, ಉತ್ತಮ ಉದ್ಯೋಗ ಅಥವಾ ವ್ಯಾಪಾರ, ಉದ್ಯಮ ಸ್ಥಾಪಿಸುವವರೆಗೂ ಕಾಯಬೇಕು. ನಂತರ ಪರಸ್ಪರರು ಜೀವನ ಸಂಗಾತಿ ಆಗುವ ಬಗ್ಗೆ ನಿರ್ಣಯಿಸಬೇಕು ಎಂದು ಅವರು ಹಿತ ನುಡಿದರು.

ವಿದ್ಯಾರ್ಥಿ ಹಂತದಲ್ಲೇ ಪ್ರೀತಿಯ ಬಲೆಗೆ ಬಿದ್ದವರು ಬಹುತೇಕ ಶೈಕ್ಷಣಿಕವಾಗಿ ಹಿನ್ನಡೆಯನ್ನು ಅನುಭವಿಸುತ್ತಾರೆ. ನಂತರ ಅವರು ಬದುಕಿನಲ್ಲೂ ಹಿನ್ನಡೆಯಾಗಿ ಸಂಕಷ್ಟಕ್ಕೀಡಾಗುತ್ತಾರೆ. ಪ್ರೀತಿ ಮಾಡುವುದು ತಪ್ಪಲ್ಲ. ಆದರೆ, ವಿದ್ಯಾರ್ಥಿ ಹಂತ ಅದಕ್ಕೆ ಸೂಕ್ತವಲ್ಲ ಎಂದು ಸಲಹೆ ನೀಡಿದರು.

ಪದವಿ ಶಿಕ್ಷಣ ಸಾಕೆಂಬ ಭಾವನೆ ಬೇಡ. ತೋಳಹುಣಸೆಯಲ್ಲಿ ಸುಸಜ್ಜಿತ ವಿವಿ ಇದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಉತ್ತಮ ಹಾಸ್ಟೆಲ್, ಕಟ್ಟಡ, ಪೀಠೋಪಕರಣ, ಬೋಧಕ ವ್ಯವಸ್ಥೆ ಇದೆ. ಪದವಿ ಶಿಕ್ಷಣದ ನಂತರ ಎಲ್ಲರೂ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯಬೇಕೆಂದರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್. ರಿಯಾಜ್ ಅಹ್ಮದ್ ಮಾತನಾಡಿ, ಮದುವೆ, ಬಡತನವೆಂದು ಯಾರೂ ಕೂಡ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಬಾರದೆಂದು ಕಿವಿ ಮಾತು ಹೇಳಿದರು.

ಪ್ರಭಾರ ಪ್ರಾಚಾರ್ಯ ಎನ್.ಎ. ಲತೀಫ್ ಮಾತನಾಡಿದರು. ಸಂಸ್ಥೆಯ ಕಾರ್ಯದರ್ಶಿ ಹೆಚ್. ಜೆ. ಮೊಹಮ್ಮದ್ ಉಮರ್, ಶೈಕ್ಷಣಿಕ ಸಲಹೆಗಾರ ಕೆ. ಜಾವೀದ್ ಅಹ್ಮದ್, ಪ್ರೌಢಶಾಲೆ ಮುಖ್ಯ ಶಿಕ್ಷಕ ಪಿ. ಕರೀಂ ಉಲ್ಲಾ, ಆಂಗ್ಲ ಮಾಧ್ಯಮ ಪ್ರೌಢಶಾಲೆ ಮುಖ್ಯ ಶಿಕ್ಷಕರಾದ ಎಸ್. ಮೀರಾಂಬಿ, ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಅಫ್ರೋಜ್ ಖಾನ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಫ್ರಾನ್ಸ್‌ನಲ್ಲಿ ಪ್ರತಿದಿನ ಲಕ್ಷ ಕೊರೊನಾ ಪ್ರಕರಣ

**ಆದರೂ, ಶಾಲೆ ಮುಚ್ಚದಿರಲು ಸರ್ಕಾರದ ನಿರ್ಧಾರ**

ಪ್ಯಾರಿಸ್, ಡಿ. 26 – ಫ್ರಾನ್ಸ್‌ನಲ್ಲಿ ಪ್ರತಿ ನಿತ್ಯ ಕಂಡು ಬರುವ ಕೊರೊನಾ ಸೋಂಕಿತರ ಸಂಖ್ಯೆ ಲಕ್ಷ ದಾಟಿದೆ. ಆದರೂ, ಸಹ ಶಾಲೆಗಳನ್ನು ಮುಚ್ಚದಿರಲು ಸರ್ಕಾರ ನಿರ್ಧರಿಸಿದೆ.

ಕಳೆದ ಒಂದು ತಿಂಗಳಲ್ಲಿ ಓಮಿಕ್ರಾನ್ ವೇಗವಾಗಿ ಹರಡಿರುವುದರಿಂದ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ. ಲಾಕ್‌ಡೌನ್‌ನಿಂದ ಹೊರ ಬರುವ ಸರ್ಕಾರದ ಪ್ರಯತ್ನಕ್ಕೆ ಓಮಿಕ್ರಾನ್ ಅಡ್ಡಿಯಾಗುತ್ತಿದೆ.

ಪ್ಯಾರಿಸ್‌ನಲ್ಲಿ ಪ್ರತಿ ನೂರರಲ್ಲಿ ಒಬ್ಬರು ಕಳೆದ ವಾರ ಕೊರೊನಾ ಪಾಸಿಟಿವ್‌ಗೆ ಗುರಿಯಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಹೊಸ ಸೋಂಕಿತರಲ್ಲಿ ಬಹುತೇಕರು ಓಮಿಕ್ರಾನ್ ರೂಪಾಂತರಿಗೆ ಸಿಲುಕಿದವ ರಾಗಿದ್ದಾರೆ. ಸೋಂಕು ಹರಡುವುದನ್ನು ತಡೆಯಲು ಮತ್ತೆ ಕರ್ಫ್ಯೂ ಹೇರಬೇಕು ಇಲ್ಲವೇ ಕ್ರಿಸ್‌ಮಸ್ ರಜೆಯ ನಂತರ ಶಾಲೆಗಳನ್ನು ತೆರೆಯುವುದನ್ನು ಮುಂದೂಡಬೇಕು ಎಂದು ಸಲಹೆಗಳು ಕೇಳಿ ಬಂದಿವೆ.

ಆದರೆ, ಎಂದಿನಂತೆ ಜನವರಿ 3ರಂದು ಶಾಲೆಗಳನ್ನು ತೆರೆಯಲಾಗುವುದು ಎಂದು ಸರ್ಕಾರ ತಿಳಿಸುತ್ತಿದೆ. ಹೆಚ್ಚು ಲಸಿಕೆ ನೀಡುವ ಮೂಲಕ ಪರಿಸ್ಥಿತಿ ನಿಭಾಯಿಸಬಹುದು ಎಂದು ಸರ್ಕಾರ ಭಾವಿಸಿದೆ. ಯುರೋಪ್ ದೇಶಗಳಲ್ಲಿ ಕೊರೊನಾ ಹೆಚ್ಚಾ ದರೂ ಸಹ ಶಾಲೆಗಳನ್ನು ಮುಚ್ಚುವಲ್ಲಿ ಆತುರ ತೋರುವ ಪ್ರವೃತ್ತಿ ಕಡಿಮೆ ಇದೆ. ಈ ಹಿಂದಿನ ಅಲೆಗಳಲ್ಲೂ ಸಹ ಶಾಲೆಗಳನ್ನು ಅವಸರದಲ್ಲಿ ಮುಚ್ಚಿರಲಿಲ್ಲ.

# ಮಲೇಬೆನ್ನೂರು : ಇಂದು ಪುರಸಭೆ ಚುನಾವಣೆ



ಆಯಾ ವಾರ್ಡಿನಲ್ಲೇ ಮತದಾನಕ್ಕೆ ವ್ಯವಸ್ಥೆ, ಬಿಗಿ ಭದ್ರತೆ

ಮಲೇಬೆನ್ನೂರು, ಡಿ.26- ಇಲ್ಲಿನ ಪುರಸಭೆಯ 21 ವಾರ್ಡ್‌ಗಳಿಗೆ ನಾಳೆ ದಿನಾಂಕ 27ರ ಸೋಮವಾರ ಚುನಾವಣೆ ನಡೆಯಲಿದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು.

ಪಟ್ಟಣದ ವಿವಿಧ ಮತಗಟ್ಟೆ ಕೇಂದ್ರಗಳಿಗೆ ಭಾನುವಾರ ಸಂಜೆ ಚುನಾವಣಾ ವೀಕ್ಷಕರೊಂದಿಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಅವರು 'ಜನತಾವಾಣಿ'ಯೊಂದಿಗೆ ಮಾತನಾಡಿದರು.

ಒಟ್ಟು 23 ವಾರ್ಡ್‌ಗಳ ಪೈಕಿ 9 ಮತ್ತು 15ನೇ ವಾರ್ಡ್‌ಗಳಲ್ಲಿ ಅವಿರೋಧವಾಗಿ ಆಯ್ಕೆಯಾಗಿರುವ ಕಾರಣ ಉಳಿದ 21 ವಾರ್ಡ್‌ಗಳಿಗೆ ಚುನಾವಣೆ ನಡೆಯಲಿದ್ದು, ಪಟ್ಟಣದ ವಿವಿಧ ಶಾಲೆ, ಕಾಲೇಜು, ಪ್ರವಾಸಿ ಮಂದಿರಗಳಲ್ಲಿ 21 ಮತಗಟ್ಟೆ ಕೇಂದ್ರಗಳನ್ನು ಮಾಡಲಾಗಿದೆ. ಆಯಾ ವಾರ್ಡಿನ ಮತದಾರರಿಗೆ ಅನುಕೂಲವಾಗುವ ದೃಷ್ಟಿಯಿಂದ ಆಯಾ ವಾರ್ಡಿನಲ್ಲೇ ಸರ್ಕಾರಿ, ಖಾಸಗಿ ಶಾಲೆಗಳು ಅಂಗನವಾಡಿ ಕೇಂದ್ರ, ಪ್ರವಾಸಿ ಮಂದಿರದಲ್ಲೂ ಮತಗಟ್ಟೆ ಕೇಂದ್ರ ಸ್ಥಾಪಿಸಿದ್ದೇವೆ.

**ಬಿಗಿ ಭದ್ರತೆ :** ಪುರಸಭೆಯ ಸಾರ್ವತ್ರಿಕ ಚುನಾವಣೆಗೆ ಬಿಗಿ ಬಂದೋಬಸ್ತ್ ಕೈಗೊಂಡಿದ್ದು, ಒಬ್ಬರು ಡಿವೈಎಸ್ಪಿ, ಒಬ್ಬರು ಸಿಪಿಐ, 8 ಜನ ಪಿಎಸ್‌ಐ, 9 ಎಎಸ್‌ಐ, 100 ಜನ ಪೊಲೀಸ್ ಸಿಬ್ಬಂದಿ ಮತ್ತು 1 ಕೆಎಸ್‌ಆರ್‌ಪಿ ತುಕಡಿ, 2 ಜಿಲ್ಲಾ ಮೀಸಲು ಪಡೆ ತುಕಡಿಯನ್ನು ನೇಮಿಸಲಾಗಿದೆ ಎಂದು ಮಲೇಬೆನ್ನೂರು ಪಿಎಸ್‌ಐ ರವಿಕುಮಾರ್ ತಿಳಿಸಿದ್ದಾರೆ.

ಮತಗಟ್ಟೆ ಕೇಂದ್ರದಿಂದ 200 ಮೀಟರ್ ಸುತ್ತಳತೆಯ ಜಾಗದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಸೋಮವಾರ ಸಂಜೆ 6 ಗಂಟೆಯವರೆಗೆ ವೈನ್‌ಷಾಪ್‌ಗಳನ್ನು ಬಂದ್ ಮಾಡಿಸಲಾಗಿದೆ ಎಂದವರು ಹೇಳಿದರು.

**ನಿಲ್ಲದ ಮನವೊಲಿಕೆ :** ಚುನಾವಣೆಯ ಮುನ್ನಾದಿನವಾದ ಭಾನುವಾರ ರಾತ್ರಿಯವರೆಗೂ ಅಭ್ಯರ್ಥಿಗಳು ಮತದಾರರನ್ನು ಮನವೊಲಿಸುವ ಪ್ರಯತ್ನ ನಡೆದಿತ್ತು. ಬಾಡೂಟ ಸೇರಿದಂತೆ ಇತರೆ ವ್ಯವಸ್ಥೆ ಎಲ್ಲಾ ವಾರ್ಡ್‌ಗಳಲ್ಲಿ ಜೋರಾಗಿತ್ತು.

# ಶಿಕ್ಷಣ, ಸಂಘಟನೆ, ಹೋರಾಟದಿಂದ ಸಮಾಜದಲ್ಲಿ ಯಶಸ್ಸು ಸಾಧ್ಯ

### ರಾಣೇಬೆನ್ನೂರಿನಲ್ಲಿ ಐಪಿಎಸ್ ಅಧಿಕಾರಿ ರವಿ ಡಿ.ಚನ್ನಣ್ಣನವರ್ ಅಭಿಮತ



ರಾಣೇಬೆನ್ನೂರು, ಡಿ. 26- ಶಿಕ್ಷಣ, ಸಂಘಟನೆ, ಹೋರಾಟ ಇವುಗಳಿಂದ ಸಮಾಜದಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದು ಐಪಿಎಸ್ ಅಧಿಕಾರಿ ರವಿ ಡಿ. ಚನ್ನಣ್ಣನವರ್ ಹೇಳಿದರು.

ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ತಾಲ್ಲೂಕು ವಾಲ್ಮೀಕಿ ನಾಯಕ ಮಹಾಸಭಾದ ವತಿಯಿಂದ ಏರ್ಪಡಿಸಿದ್ದ ಸನ್ಮಾನ ಮತ್ತು ಗೌರವ ಸಮರ್ಪಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಡೀ ಜಗತ್ತಿನ ಸಮಸ್ಯೆಗೆ ಶಿಕ್ಷಣವೇ ಮದ್ದಾಗಿದೆ. ಈ ನಿಟ್ಟಿನಲ್ಲಿ ಸರ್ವರೂ ಮಕ್ಕಳಿಗೆ ಶಿಕ್ಷಣವನ್ನು ಕಲಿಸುವುದರ ಜೊತೆಗೆ ಮಕ್ಕಳ ಮೇಲಿನ ಜವಾಬ್ದಾರಿ ನಿಮ್ಮದಾಗಬೇಕು ಎಂದರು.

ಯಾವುದೇ ಒಂದು ಸಮಾಜ ಆರ್ಥಿಕವಾಗಿ ಗುರುತಿಸಬೇಕಾದರೆ ಶಿಕ್ಷಣದ ವ್ಯವಸ್ಥೆ ಬೇಕು. ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿ ಇವುಗಳು ಇದ್ದಾಗ ಮಾತ್ರ ಆರ್ಥಿಕವಾಗಿ ಸದೃಢರಾಗಿರಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ವೈಮನಸ್ಸು, ದ್ವೇಷ, ಅಸೂಯೆ, ಕಲಹಗಳನ್ನು ಬಿಟ್ಟು ಹೊಂದಾಣಿಕೆ, ಉತ್ತಮ ಬಾಂಧವ್ಯದ ಜೊತೆಗೆ ಬೆರೆತಾಗ ಅಲ್ಲಿರುವಂತಹ ಸುಖ, ಸಂತೋಷ ಎಲ್ಲೂ ಸಿಗುವುದಿಲ್ಲ ಎಂದರು.

ಮಹಾಸಭಾದ ತಾಲ್ಲೂಕು ಅಧ್ಯಕ್ಷ ಚಂದ್ರಣ್ಣ ಬೇಡರ ಅಧ್ಯಕ್ಷತೆ ವಹಿಸಿದ್ದರು. ಸಿ.ಕೆ.ಪಾರ್ವತೇರ, ನಾಗರಾಜಪ್ಪ ಹಳ್ಳೆಳ್ಳಪ್ಪನವರ, ಮಂಜುನಾಥ ಓಲೇಕಾರ, ಗಿರಿಜಮ್ಮ ಬ್ಯಾಲದಹಳ್ಳಿ, ಸಣ್ಣತಮ್ಮಪ್ಪ ಬಾರ್ಕಿ, ಶಶಿಧರ ಬಸೇನಾಯಕರ, ರವೀಂದ್ರಗೌಡ ಪಾಟೀಲ, ಭೀಮಣ್ಣ ಯಡಚಿ, ರಮೇಶ ತೆವರೆ, ಡಾ. ಪರಮೇಶ ಹುಬ್ಬಳ್ಳಿ, ಎಂ.ಎಚ್.ಪಾಟೀಲ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ದ.ಆಫ್ರಿಕಾದಲ್ಲಿ ಓಮಿಕ್ರಾನ್ ಇಳಿಕೆ

**(1ನೇ ಪುಟದಿಂದ)** ಇದುವರೆಗೂ ನಡೆದಿರುವ ಅಧ್ಯಯನಗಳ ಪ್ರಕಾರ, ಓಮಿಕ್ರಾನ್ ಹರಡುವ ವೇಗ ಹೆಚ್ಚಾಗಿದೆ. ಸೋಂಕು ಬಂದ ಮೂರೇ ದಿನಗಳಲ್ಲಿ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಡೆಲ್ಟಾ ರೂಪಾಂತರಿಯಲ್ಲಿ ನಾಲ್ಕರಿಂದ ಆರನೇ ದಿನ ಲಕ್ಷಣಗಳು ಕಂಡು ಬರುತ್ತಿದ್ದವು.

ದಕ್ಷಿಣ ಆಫ್ರಿಕಾದಲ್ಲಿ ಓಮಿಕ್ರಾನ್ ಸೋಂಕು ಇಳಿಮುಖವಾಗಿರುವುದನ್ನು ಪರಿಗಣಿಸಿದಾಗ, ಸೋಂಕು ಹರಡಿದ ವೇಗದಲ್ಲೇ ಇಳಿಕೆಯಾಗುವ ಸಾಧ್ಯತೆ ಇದೆ ಎಂಬುದು ಸ್ಪಷ್ಟವಾಗುತ್ತಿದೆ. ಓಮಿಕ್ರಾನ್ ಸಂದರ್ಭದಲ್ಲಿ ದಕ್ಷಿಣ ಆಫ್ರಿಕಾ ಯಾವುದೇ ತೀವ್ರ ಸ್ವರೂಪದ ಲಾಕ್‌ಡೌನ್ ಇಲ್ಲವೇ ನಿರ್ಬಂಧಗಳನ್ನು ಹೇರಿರಲಿಲ್ಲ.

## ಪತ್ರಕರ್ತರ ಸಂಘದ ಪ್ರಶಸ್ತಿ



**(1ನೇ ಪುಟದಿಂದ)** ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದ ತೊಗರಿ ಬೀಡು ಕಲಬುರಗಿಯಲ್ಲಿ ಬರುವ ಜನವರಿ 3 ಮತ್ತು 4 ರಂದು ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ 36 ನೇ ರಾಜ್ಯ ಸಮ್ಮೇಳನ ನಡೆಯಲಿದ್ದು, ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಪ್ರಶಸ್ತಿ ಪುರಸ್ಕೃತರಾದ ಬಾ.ಮ. ಮತ್ತು ತಿಮ್ಮೇಶ್ ಅವರುಗಳನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ವೀರಪ್ಪ ಬಾವಿ, ಪ್ರಧಾನ ಕಾರ್ಯದರ್ಶಿ ಇ.ಎಂ.ಮಂಜುನಾಥ, ಖಜಾಂಚಿ ಮಂಜಪ್ಪ ಮಾಗನೂರು, ಜಿಲ್ಲಾ ಉಪಾಧ್ಯಕ್ಷ ಹೆಚ್.ಎಂ.ಪಿ. ಕುಮಾರ್, ಸಂಘದ ರಾಜ್ಯ ಘಟಕದ ನಿರ್ದೇಶಕ ಕೆ. ಚಂದ್ರಣ್ಣ ಮತ್ತು ಇತರರು ಅಭಿನಂದಿಸಿದ್ದಾರೆ. ಹಿರಿಯ ಪತ್ರಕರ್ತರೂ ಆದ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಸವರಾಜ ಐರಣಿ, ಹಿರಿಯ ನ್ಯಾಯವಾದಿ ಎಲ್.ಹೆಚ್. ಅರುಣ್ ಕುಮಾರ್ ಅವರುಗಳು ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದಿದ್ದಾರೆ.

## ನಿಟುವಳ್ಳಿಯಲ್ಲಿ ನಾಳೆ ದುರ್ಗಾಂಬಿಕಾ ದೇವಿ, ಕರಿಯಮ್ಮ ದೇವಿ ಕಾರ್ತಿಕೋತ್ಸವ

ದಾವಣಗೆರೆ, ಡಿ.26- ನಿಟುವಳ್ಳಿ ಗ್ರಾಮ ದೇವತೆಗಳಾದ ಶ್ರೀ ದುರ್ಗಾಂಬಿಕಾ ದೇವಿ ಹಾಗೂ ಶ್ರೀ ಕರಿಯಮ್ಮ ದೇವಿ ಕಾರ್ತಿಕ ಮಹೋತ್ಸವ ನಾಡಿದ್ದು ದಿನಾಂಕ 28 ರಂದು ಮಂಗಳವಾರ ಜರುಗಲಿದೆ. ಕಾರ್ತಿಕದ ಅಂಗವಾಗಿ ಅಂದು ಬೆಳಿಗ್ಗೆ ಪಂಚಾಮೃತ ಅಭಿಷೇಕ, ಸಂಜೆ 6 ಕ್ಕೆ ವಿಶೇಷ ಅಲಂಕಾರ, ಪೂಜೆ ನಂತರ ಕಾರ್ತಿಕ ಮಹೋತ್ಸವ ನಡೆಯಲಿದೆ. ರಾತ್ರಿ 9 ಕ್ಕೆ ದುರ್ಗಾಂಬಿಕ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ಏರ್ಪಡಿಸಲಾಗಿದೆ.

## ನಗರದಲ್ಲಿಂದು ಮಾರ್ಕಂಡೇಶ್ವರ ಕಾರ್ತಿಕ

ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಪದ್ಮಶಾಲಿ ಸಮಾಜ ಸೇವಾ ಸಂಘದ ವತಿಯಿಂದ ಇಂದು ಕಡೇ ಕಾರ್ತಿಕೋತ್ಸವ ಇಂದು ನಡೆಯಲಿದೆ. ಬೆಳಿಗ್ಗೆ 7.30 ರಿಂದ ಸ್ವಾಮಿಗೆ ಪಂಚಾಮೃತ ಅಭಿಷೇಕ, ಮಹಾಪೂಜೆ ನಡೆಯುವುದು. ಅಂದು ಸಂಜೆ 5.30 ರಿಂದ ಮಹಾಪೂಜೆ, ರಾತ್ರಿ 8 ಗಂಟೆಗೆ ಸ್ವಾಮಿಯ ಕಾರ್ತಿಕ ನೆರವೇರುವುದು ಎಂದು ಪದ್ಮಶಾಲಿ ಸಮಾಜದ ಅಧ್ಯಕ್ಷ ಪಿ.ಜೆ. ನಾಗರಾಜ್, ಕಾರ್ಯದರ್ಶಿ ಡಿ.ಎಸ್.ಕೆ. ಪರಶುರಾಂ ತಿಳಿಸಿದ್ದಾರೆ.

## ಕ್ಷತ್ರಿಯ ಒಕ್ಕೂಟ ಸಾಗರ್ ಅಧ್ಯಕ್ಷ



ದಾವಣಗೆರೆ, ಡಿ. 26- ಕರ್ನಾಟಕ ಕ್ಷತ್ರಿಯ ಒಕ್ಕೂಟದ ದಾವಣಗೆರೆ ತಾಲ್ಲೂಕು ಅಧ್ಯಕ್ಷರಾಗಿ ಜರೇಕಟ್ಟೆಯ ಪಿ.ಬಿ. ಸಾಗರ್ ಅವರು ನೇಮಕ ಗೊಂಡಿದ್ದಾರೆ.

## ನಗರದಲ್ಲಿ ನಾಳೆ ಜಿಲ್ಲಾ ಮಟ್ಟದ ಉದ್ಯೋಗ ಮೇಳ

ದಾವಣಗೆರೆ ಡಿ.26- ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಆಜಾದಿ ಕಾ ಅಮೃತ ಮಹೋತ್ಸವ್ ಕ್ಯಾಂಪೇನ್ ಕಾರ್ಯಕ್ರಮದ ನಿಮಿತ್ತ ನಾಡಿದ್ದು ದಿನಾಂಕ 28 ರಂದು ಬೆಳಿಗ್ಗೆ 9 ಗಂಟೆಗೆ ಉದ್ಯೋಗ ಮೇಳವನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದೆ.

ಉದ್ಯೋಗ ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳಿಂದ 20 ಪ್ರತಿಷ್ಠಿತ ಉದ್ಯೋಗದಾತ ಕಂಪನಿಗಳು ಭಾಗವಹಿಸುತ್ತವೆ. ಉದ್ಯೋಗ ಮೇಳಕ್ಕೆ ಅಭ್ಯರ್ಥಿಗಳು ಈ ಕೆಳಗಿನ ಲಿಂಕ್ ಬಳಸಿ ಆನ್‌ಲೈನ್ ಮೂಲಕ ನೊಂದಣಿ ವೆಬ್‌ಸೈಟ್ https://forms.gle/isZ-tFsVW6tkXsuJD6 ಮಾಡಬಹುದೆಂದು ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ್ ತಿಳಿಸಿದ್ದಾರೆ.

## ಪುನೀತ್ ಆದರ್ಶದಂತೆ ರಕ್ತ-ನೇತ್ರದಾನ ಮಾಡಬೇಕು

**(1ನೇ ಪುಟದಿಂದ)** ವೇದಿಕೆಯ ಮೇಲೆ ಕ.ಸಾ.ಪ. ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಸಿದ್ದಗಂಗಾ ಪಿ.ಯು. ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್, ಅಖಿಲ ಕರ್ನಾಟಕ ಸರ್ವಜ್ಞ ಸಾಂಸ್ಕೃತಿಕ ಕಲಾವೇದಿಕೆ ರಾಜ್ಯಾಧ್ಯಕ್ಷ ಕೆ.ವೈ. ತಿಪ್ಪೇಸ್ವಾಮಿ, ಜಿಲ್ಲಾ ಹಿಂದುಳಿದ ಕುಂಬಾರ ಸಂಘದ ಗೌರವಾಧ್ಯಕ್ಷ ಕೆ.ಎಸ್. ಜಯ್ಯಪ್ಪ, ಜಿಲ್ಲಾ ಹಿಂದುಳಿದ ಕುಂಬಾರ ಸಂಘದ ಅಧ್ಯಕ್ಷ ಕೆ.ಎನ್. ಬಸವರಾಜ್, ಮುಖಂಡರಾದ ಹಿರಿಯಮ್ಮ ಮಂಜಪ್ಪ, ನಾಗಮ್ಮ ಮತ್ತಿತರರು ಉಪಸ್ಥಿತರಿದ್ದರು.


**ಹುಟ್ಟುಹಬ್ಬದ ಶುಭಾಶಯಗಳು**



**ಚಿ॥ ಮನೀಷ್ ಅಣ್ಣಿಗೇರಿ**

ಇಂದು ತನ್ನ ಮೂರನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದು, ಅವನಿಗೆ ನಮ್ಮೆಲ್ಲರ ಶುಭಾಶಯಗಳು.

- ✦ ತಂದೆ: ನಾಗರಾಜ್
- ✦ ತಾಯಿ: ಶ್ವೇತಾ
- ✦ ಅಜ್ಜ: ಬಕ್ಕೇಶ್ ನಾಗನೂರು
- ✦ ಅಜ್ಜಿಯಂದಿರು: ಸರೋಜ, ಶಾಂತಮ್ಮ
- ✦ ದೊಡ್ಡಪ್ಪಂದಿರು: ರುದ್ರೇಶ್ ಮತ್ತು ಸುರೇಶ್
- ✦ ದೊಡ್ಡಮ್ಮಂದಿರು: ಸುಧಾ ಹಾಗೂ ಕವಿತಾ
- ✦ ಮಾವ : ವಿನಾಯಕ
- ✦ ಅಕ್ಕಂದಿರು : ಅಮೃತ ಮತ್ತು ಅನನ್ಯ
- ✦ ಅಣ್ಣಂದಿರು : ಅಭಿಷೇಕ್, ಅಭಯ್, ತೇಜಸ್ ಹಾಗೂ ಬಂಧು-ಮಿತ್ರರು.


# ನ್ಯಾಯಮೂರ್ತಿಗಳ ನೇಮಕದಲ್ಲಿ ಹಲವರು ಭಾಗಿಯಾಗಿರುತ್ತಾರೆ

**(1ನೇ ಪುಟದಿಂದ)** ಹೈಕೋರ್ಟ್ ಕೊಲೀಜಿಯಂ, ಗುಪ್ತಚರ ದಳ ಹಾಗೂ ಉನ್ನತ ಕಾರ್ಯಾಂಗ ಅಭ್ಯರ್ಥಿಯ ಅರ್ಹತೆ ಪರಿಶೀಲಿಸುತ್ತಾರೆ. ಆದರೂ, ಒಂದು ವರ್ಗ ತನಗೆ ಸೂಕ್ತವೆನಿಸಿದ ರೀತಿ ಪ್ರಚಾರ ಮಾಡುತ್ತಿದೆ ಎಂದು ನ್ಯಾಯಮೂರ್ತಿ ರಮಣ ಹೇಳಿದ್ದಾರೆ.

ನ್ಯಾಯಿಕ ಅಧಿಕಾರಿಗಳ ಮೇಲೆ ಹಲ್ಲೆ ನಡೆಸುವ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ತಮಗೆ ಅನುಕೂಲಕರವಾದ ಆದೇಶ ಹೊರ ಬರದೇ ಇದ್ದಾಗ ಮುದ್ರಣ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ನ್ಯಾಯಮೂರ್ತಿಗಳ ವಿರುದ್ಧ ಅಭಿಯಾನ ನಡೆಸುವುದೂ ಸಹ ಕಂಡುಬಂದಿದೆ ಎಂದವರು ವಿಷಾದಿಸಿದ್ದಾರೆ.

ಭಾರತದಲ್ಲಿ ಹಿಂದಿನಿಂದಲೂ ಪ್ರಾಸಿಕ್ಯೂಟರ್‌ಗಳು ಸರ್ಕಾರದ ನಿಯಂತ್ರಣದಲ್ಲಿ ದ್ದಾರೆ. ಹೀಗಾಗಿ ಅವರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸದೇ ಇರುವುದರಲ್ಲಿ ಅಚ್ಚರಿ ಇಲ್ಲ. ಕ್ಷುಲ್ಲಕ ಪ್ರಕರಣಗಳು ನ್ಯಾಯಾಲಯಕ್ಕೆ ಬರದಂತೆ ತಡೆಯುವಲ್ಲಿ ಅವರು ಪಾತ್ರ ವಹಿಸುತ್ತಿಲ್ಲ. ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಸರ್ವೇ ಸಾಮಾನ್ಯ ಎಂಬಂತೆ ಜಾಮೀನು ಅರ್ಜಿ ವಿರೋಧಿಸುತ್ತಾರೆ. ಆರೋಪಿಗಳಿಗೆ ಅನುಕೂಲವಾಗುವ ರೀತಿಯ ಸಾಕ್ಷಿಗಳನ್ನು ವಿಚಾರಣೆ ಹಂತದಲ್ಲಿ ಹತ್ತಿಕ್ಕುತ್ತಾರೆ ಎಂದೂ ನ್ಯಾಯಮೂರ್ತಿ ಹೇಳಿದ್ದಾರೆ.

ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ರಕ್ಷಣೆಗಾಗಿ ಸಮಗ್ರ ವ್ಯವಸ್ಥೆಯ ಅಗತ್ಯವಿದೆ. ಅವರ ನೇಮಕಕ್ಕೆ ಸ್ವತಂತ್ರ ಆಯ್ಕೆ ಸಮಿತಿ ರೂಪಿಸಬೇಕಿದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

ಬಿಹಾರದ ಪಾನ ನಿಷೇಧ ಕಾಯ್ದೆಯನ್ನು ಪ್ರಸ್ತಾಪಿಸಿದ ಅವರು, ಈ ಕಾಯ್ದೆಯ ನಂತರ ಹೈಕೋರ್ಟ್‌ನಲ್ಲಿ ಈಗ ಸಾಕಷ್ಟು ಜಾಮೀನು ಅರ್ಜಿಗಳು ತುಂಬಿಕೊಂಡಿವೆ.

## ನಗರದಲ್ಲಿ ವಿದ್ಯುತ್ ಇಲ್ಲ

ಸರಸ್ವತಿ ಬಡಾವಣೆ ಎ ಮತ್ತು ಬಿ ಬ್ಲಾಕ್, ಜಯನಗರ ಎ, ಬಿ ಮತ್ತು ಸಿ ಬ್ಲಾಕ್, ಭೂಮಿಕ ನಗರ, ಜೆ.ಎನ್. ಕಾನ್ವೆಂಟ್, ಕೆಎಸ್ಎಸ್ ಕಾಲೇಜ್, ಭದ್ರಾ ಕಾಲೋನಿ, ಹದಡಿ ರೋಡ್, ಇನ್‌ಕಂ ಟ್ಯಾಕ್ಸ್ ಬಿಲ್ಡಿಂಗ್, ಡಿಆರ್‌ಆರ್ ಹಾಸ್ಟೆಲ್, ಅನುಭವ ಮಂಟಪ ಸ್ಕೂಲ್ ಮತ್ತು ಸುತ್ತಮುತ್ತಲಿನಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಇರುವುದಿಲ್ಲ.

## ಗ್ರಾಮೀಣ ಭಾಗದಲ್ಲಿನ್ನೂ ಅಸ್ಪೃಶ್ಯತೆ

**(1ನೇ ಪುಟದಿಂದ)** ಗುರಿಪಡಿಸಬೇಕು ಹಾಗೂ ಆ ಗ್ರಾಮದ ಪರಿಶಿಷ್ಟ ಜಾತಿ ಸಮುದಾಯಕ್ಕೆ ಮುಕ್ತ ಅವಕಾಶ ಕಲ್ಪಿಸಿಕೊಡಬೇಕು ಎಂದು ಡಾ. ಅಂಬೇಡ್ಕರ್ ಪೀಪಲ್ ಪಾರ್ಟಿ ಆಗ್ರಹಪಡಿಸುತ್ತದೆ.

ವಿಜಯನಗರ ಜಿಲ್ಲೆಯಲ್ಲಿ ವಿವಿಧ ರೀತಿಯಲ್ಲಿ ಅಸ್ಪೃಶ್ಯತೆ ಜೀವಂತವಾಗಿದೆ ಎನ್ನುವುದು ಗೊತ್ತಾಗುತ್ತದೆ. ಭಾರತ ಸಂವಿಧಾನದ ಆಶಯದಂತೆ ಹಾಗೂ ಕಾನೂನುಗಳನ್ನು ಪಾಲಿಸುವುದರಲ್ಲಿ ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು. ಇಡೀ ಜಿಲ್ಲೆಯ ಸಮೀಕ್ಷೆ ಮತ್ತು ಮಾಹಿತಿ ಸಂಗ್ರಹಣೆ ಆಧಾರದ ಮೇಲೆ ಸಾಮಾಜಿಕ ಪಿಡುಗು ಅಸ್ಪೃಶ್ಯತೆ ಆಚರಣೆಯನ್ನು ತೊಡೆದುಹಾಕಲು ಸಾಧ್ಯವಾಗಿಲ್ಲ. ಜಿಲ್ಲೆಯಲ್ಲಿ ಅಸ್ಪೃಶ್ಯತೆ ನಿರ್ಮೂಲನೆ ಮಾಡದೇ ಹೋದರೆ ಜಿಲ್ಲಾಡಳಿತವನ್ನೇ ಹೊಣೆಗಾರರನ್ನಾಗಿ ಮಾಡಿ, ಎಸ್ಪಿ-ಡಿಸಿಗಳ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಕಂಟೆಪ್ಟ್ ಪಿಟಿಸಿಎಲ್ ಕೇಸ್ ದಾಖಲು ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಪೀಪಲ್ ಪಾರ್ಟಿಯ ಸಂಸ್ಥಾಪಕ ದೇವ ಮಿತ್ರ ರಾಯಚೂರು, ರಾಜ್ಯಾಧ್ಯಕ್ಷ ಮಾರುತಿರಾವ್ ಜಂಬಗಾ, ಇಂದು ಸಂಜೆ ದಾವಣಗೆರೆ ಜಿಲ್ಲಾ ವರದಿಗಾರ ಎಂ.ಹೆಚ್ ರಾಜು, ವಕೀಲರಾದ ಚಿಕ್ಕಮೇಗಳಗೆರೆ ರೇವಣಸಿದ್ದಪ್ಪ, ಪ್ರಭಾಕರ್, ನಾಗರಾಜ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


**ವಾಸವಿ ಯುವಜನ ಸಂಘ (ರಿ)**
**ಎಸ್.ಕೆ.ಪಿ. ರಸ್ತೆ, ದಾವಣಗೆರೆ**

**ಜನ್ಮದಿನದ ಶುಭಾಶಯಗಳು**



**ಶ್ರೀ ಬಿ.ಎನ್. ಸಾಯಿಪ್ರಸಾದ್**
ಗೌರವಾಧ್ಯಕ್ಷರು



ಮಾತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರು ಅವರಿಗೆ ಆಯುರಾರೋಗ್ಯ-ಅಷ್ಟೈಶ್ವರ್ಯ-ಸುಖ-ಶಾಂತಿ - ನೆಮ್ಮದಿ ನೀಡಲಿ ಹಾಗೂ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ಹಾರೈಸುತ್ತೇವೆ.

**ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು**
**ವಾಸವಿ ಯುವಜನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ.**

ಸಂಚಾರಿ ನಿಯಮ ಪಾಲಿಸಿ ಸುರಕ್ಷಿತವಾಗಿರಿ



## ನಾಗನೂರಿನಲ್ಲಿ ಇಂದಿನಿಂದ ಶ್ರೀ ಉಮಾ ಮಹೇಶ್ವರ ಜಾತ್ರೆ

ದಾವಣಗೆರೆ ತಾಲ್ಲೂಕು ನಾಗನೂರು ಗ್ರಾಮದಲ್ಲಿ ಇಂದಿನಿಂದ ಮೂರು ದಿನ ಶ್ರೀ ಉಮಾ ಮಹೇಶ್ವರ ಜಾತ್ರೆ ನಡೆಯಲಿದೆ.

**ದಿನಾಂಕ 27.12.2021ರ ಸೋಮವಾರ** ಬೆಳಿಗ್ಗೆ 6 ಗಂಟೆಗೆ ಶ್ರೀ ಉಮಾ ಮಹೇಶ್ವರ ಮತ್ತು ಶ್ರೀ ಆಂಜನೇಯ ಸ್ವಾಮಿಗೆ ರುದ್ರಾಭಿಷೇಕ ಜರುಗಲಿದೆ. ಸಂಜೆ ಭಕ್ತರಿಂದ ಜವಳ, ಹರಕೆ ಅರ್ಪಿಸುವುದು, ಶ್ರೀ ಬಸವೇಶ್ವರ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿ ಕಾರ್ತಿಕ ಆರಾಧನೆ ನಂತರ ಶಿರಮಗೊಂಡನಹಳ್ಳಿ ಶ್ರೀ ಚನ್ನಬಸವೇಶ್ವರ ಸ್ವಾಮಿಯನ್ನು ಡೊಳ್ಳು-ಮೇಳಗಳಿಂದ ನಾಗನೂರು ಗ್ರಾಮಸ್ಥರು ಬರ ಮಾಡಿಕೊಂಡು ಮೆರವಣಿಗೆ ಸಮೇತ ವಿರಾಮ ಮಂಟಪದಲ್ಲಿ ತಂಗುವುದು. ರಾತ್ರಿ ಕೋಲಾಟ, ವೀರಗಾಸೆ, ಭಜನೆ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿವೆ.

**ದಿನಾಂಕ 28.12.2021ರ ಮಂಗಳವಾರ** ಬೆಳಿಗ್ಗೆ 6 ಗಂಟೆಗೆ ದೊಡ್ಡಕಲ್ಲಪ್ಪರ ವಿರೂಪಣ್ಣನವರ ಮನೆಯಿಂದ ಮತ್ತು ಮಠದ ಮಹೇಶ್ವರಯ್ಯನವರ ಮನೆಯಿಂದ ಶ್ರೀ ಸ್ವಾಮಿ ಮತ್ತು ಗುರುಗಳ ಆಗಮನದೊಂದಿಗೆ ಉರುಳು ಸೇವೆ ಮಾಡುವವರಿಗೆ ಸಕಲ ಭಕ್ತಾದಿ ಹೆಣ್ಣು ಮಕ್ಕಳು ನೀರು ಹಾಕುವುದು, ಅದೇ ಸಮಯದಲ್ಲಿ ಶ್ರೀ ಸ್ವಾಮಿಯನ್ನು ಮಡಿಯಿಂದ ತೋಟದ ಮಠಕ್ಕೆ ಕರೆದೊಯ್ಯುವುದು. ನಂತರ ಮಠದಲ್ಲಿ ಗಂಗಾಪೂಜೆ ಮಾಡಿ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ನಡೆಯಲಿದೆ. ಮಧ್ಯಾಹ್ನ ಬೆಲ್ಲದ ಬಂಡಿ ಎತ್ತುಗಳನ್ನು ಡೊಳ್ಳು - ಹಲಗೆ ಮೆರವಣಿಗೆ, ರಾತ್ರಿ 7ರಿಂದ ಶ್ರೀ ದುರುಗಮ್ಮ ದೇವಿ ಕಾರ್ತಿಕೋತ್ಸವ ಜರುಗಲಿದೆ.

**ದಿನಾಂಕ 29.12.2021ರ ಬುಧವಾರ** ಬೆಳಿಗ್ಗೆ 8 ರಿಂದ 3 ಗಂಟೆಯವರೆಗೆ ಮಠದಲ್ಲಿ ಪ್ರಸಾದ ವಿನಿಯೋಗ, ಮಧ್ಯಾಹ್ನ 12 ಗಂಟೆಗೆ ಎತ್ತುಗಳ ಮೆರವಣಿಗೆ, ಸಂಜೆ 4 ಗಂಟೆಗೆ ಗ್ರಾಮದ ಎಲ್ಲಾ ಭಕ್ತರು ಸೇರಿ ಮುಡುಪು, ಹರಕೆಯನ್ನು ತೋಟದ ಮಠಕ್ಕೆ ಮೆರವಣಿಗೆ ಮುಖಾಂತರ ಅರ್ಪಿಸುವುದು. ಮಠದ ಗದ್ದುಗೆಯಿಂದ ಸ್ವಾಮಿಯನ್ನು ಮೆರವಣಿಗೆಯೊಂದಿಗೆ ಗ್ರಾಮದೊಳಗೆ ಬರಮಾಡಿಕೊಳ್ಳುವುದು. ಊರ ಅಗಸೆ ಬಾಗಿಲಲ್ಲಿ ಸ್ವಾಮಿಯ ಬಾವುಟ ಹರಾಜು ನಡೆಯಲಿದೆ. ನಂತರ ಸಕಲ ಭಕ್ತಾದಿಗಳಿಗೆ ಸಂಜೆ 7ಕ್ಕೆ ಪ್ರಸಾದ ವಿನಿಯೋಗ ಏರ್ಪಾಡಾಗಿದೆ.

**ದಿನಾಂಕ 28.12.2021ರ ಮಂಗಳವಾರ ಮಧ್ಯಾಹ್ನ ರಂಗೋಲಿ ಸ್ಪರ್ಧೆ ಏರ್ಪಾಡಾಗಿದೆ.**

ಸರ್ವ ಭಕ್ತಾದಿಗಳು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಹೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಲು ವಿನಂತಿ.

**ನಾಗನೂರು ಹಾಗೂ ಶಿರಮಗೊಂಡನಹಳ್ಳಿ ಗ್ರಾಮಸ್ಥರು.**



## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಮಹಮದ್ ಸಕೀಬ್ ಬಿನ್ ಖತೀಬ್ ಶಬ್ಬೀರ್ ಅಹ್ಮದ್ ಅಬ್ದುಲ್ ಹಾದಿ ಸಾಬ್ ಅಲಿಯಾಸ್ ಶಬ್ಬೀರ್ ಸಾಬ್**, ರಜಾವುಲ್ಲಾ ಮುಸ್ತಫಾ ನಗರ 13ನೇ ಕ್ರಾಸ್, ದಾವಣಗೆರೆ ಇವರು ಶ್ರೀಯುತ ಶ್ರೀನಿವಾಸ ಬಿನ್ ಲೇಟ್ ಸುಂಕಪ್ಪ, ಮುದ್ದಾಭೋವಿ ಕಾಲೋನಿ, ಹಳೇ ಬೇತೂರು ರಸ್ತೆ, ದಾವಣಗೆರೆ ಇವರ ವಿರುದ್ಧ ದಾವಣಗೆರೆಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವೆ 98/2021 ರಲ್ಲಿ ಶ್ರೀನಿವಾಸ ಇವರು ದಾವಣಗೆರೆ ತಾಲ್ಲೂಕು ದೊಡ್ಡಬೂದಿಹಾಳ್ ಗ್ರಾಮದ ಸರ್ವೆ ನಂ. 87/1ಪಿ2 ಇದರ ವಿಸ್ತೀರ್ಣ 2 ಎಕರೆ ಜಮೀನನ್ನು ರೂ. 8 ಲಕ್ಷಗಳಿಗೆ ಮಾರಾಟ ಮಾಡಿ, ಮಾರಾಟದ ಬಾಬ್ತು ರೂ. 4 ಲಕ್ಷಗಳನ್ನು ಮುಂಗಡವಾಗಿ ಪಡೆದುಕೊಂಡು ದಿನಾಂಕ 21.02.2019 ರಂದು ದಾವಣಗೆರೆ ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ ಕ್ರಯದ ಕರಾರು ಪತ್ರವನ್ನು ನೋಂದಾಯಿಸಿ ಕೊಟ್ಟಿದ್ದು, ತದನಂತರ ಕರಾರು ಪತ್ರದ ಷರತ್ತುಗಳಂತೆ ನಡೆದುಕೊಳ್ಳದೆ, ಮಾರಾಟ ಮಾಡಿದ ಜಮೀನಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ನೋಂದಾಯಿಸಿಕೊಡದೇ ಇರುವ ಕಾರಣವಾಗಿ ಮೇಲ್ಕಂಡ ನಮ್ಮ ಕಕ್ಷಿದಾರರು ಮೇಲೆ ಹೇಳಲಾದ ನ್ಯಾಯಾಲಯದಲ್ಲಿ ನಿರ್ದಿಷ್ಟ ಕರಾರಿನ ನೆರವೇರಿಕೆ ದಾವೆಯನ್ನು ಹೂಡಿದ್ದು, ಸದರಿ ದಾವೆಯಲ್ಲಿ ನಮ್ಮ ಕಕ್ಷಿದಾರರು ದಾವಣಗೆರೆ ತಾಲ್ಲೂಕು ದೊಡ್ಡಬೂದಿಹಾಳು ಗ್ರಾಮದ ಸರ್ವೆ ನಂ.87/1ಪಿ2 ರ ವಿಸ್ತೀರ್ಣ 2 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಚೆಕ್ಕುಬಂದಿಯಲ್ಲಿ ವಿವರಿಸಿರುವ ಸ್ವತ್ತನ್ನು ಶ್ರೀನಿವಾಸ ಇವರಾಗಲೀ, ಇವರ ಪರ ಯಾರೇ ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿಕೊಂಡಿದ್ದು ಮಾನ್ಯ ನ್ಯಾಯಾಲಯವು ಪ್ರತಿವಾದಿಯಾದ ಶ್ರೀನಿವಾಸ ಇವರಾಗಲೀ ಇವರ ಪರ ಯಾರೇ ಆಗಿ ಮೇಲೆ ಹೇಳಲಾದ ಜಮೀನನ್ನು ಮಾರಾಟ ಮಾಡದ ಹಾಗೆ ತಡೆದಿರುತ್ತದೆ. ಸ.ನಂ. 87/1ಪಿ2 ಜಮೀನಿಗೆ ಈ ರಿತಿ ಚಕ್ಕುಬಂದಿ ಹೊಂದಿರುವ ಆಸ್ತಿಯನ್ನು ಅಂದರೆ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಿ.ಸರ್ವೆ ನಂ. 87/2, ಉತ್ತರಕ್ಕೆ ದುಗ್ಗಮ್ಮ ಕೋಂ ಶ್ರೀನಿವಾಸ ಇವರ ಜಮೀನು, ದಕ್ಷಿಣಕ್ಕೆ ಬಿ. ಕೃಷ್ಣಪ್ಪ ಮತ್ತು ಬಿ.ಕೆ. ಹನುಮಂತಪ್ಪ ಇವರ ಜಮೀನು, ಈ ಮಧ್ಯದ ಜಮೀನೊಂದಕ್ಕೆ ತಡೆಯಾಜ್ಞೆ ನೀಡಿರುತ್ತಾರೆ. ಕಾರಣ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೇ, ಮೇಲ್ಕಂಡ ಚೆಕ್ಕುಬಂದಿಯೊಳಗಿನ ಸರ್ವೆ ನಂ. 87/1ಪಿ2 ರ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಿಂದ ಖರೀದಿಯಾಗಲೀ ಅಥವಾ ಇತರೆ ವ್ಯವಹಾರವನ್ನು ಮಾಡಬಾರದಾಗಿ ಕೋರಿಕೊಳ್ಳುತ್ತೇನೆ. ಈ ಪತ್ರಿಕಾ ಪ್ರಕಟಣೆ ಗಮನಿಸಿಯೂ ತಾವು ಮೇಲೆ ಹೇಳಲಾದ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹಾರ ನಡೆಸಿದ್ದಲ್ಲಿ ಅದು ಅಕ್ರಮ ಹಾಗೂ ಗೈರು ಕಾನೂನಾಗಿದ್ದು, ಅಂತಹ ವ್ಯವಹಾರವು ನಮ್ಮ ಕಕ್ಷಿದಾರರನ್ನು ಯಾವತ್ತೂ ಬಾಂಧಯಿಸುವುದಿಲ್ಲ. ಇಂತಹ ಅಕ್ರಮ ಕೃತ್ಯವನ್ನು ನನ್ನ ಕಕ್ಷಿದಾರರು ನ್ಯಾಯಾಲಯದ ಗಮನಕ್ಕೆ ತಂದು ಅಂತಹವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಕೋರಿಕೊಳ್ಳಬೇಕಾಗುತ್ತದೆ ತಿಳಿಯಿರಿ.

**ದಾದಾಪೀರ್ ಕೆ.,**
ಬಿ.ಕಾಂ, ಎಲ್‌ಎಲ್.ಬಿ., ವಕೀಲರು.,
ಮೊ: 98442 37951

**ಹೆಚ್.ಪಿ. ಸಂಜೀದಾ ಬಾನು,**
ಬಿ.ಎ, ಎಲ್‌ಎಲ್.ಬಿ., ವಕೀಲರು.,
ಮೊ: 99160 36080

# 4218, 3ನೇ ಮೇನ್, 13ನೇ ಕ್ರಾಸ್, ವಿನೋಬನಗರ, ರಿಂಗ್ ರೋಡ್ ಹತ್ತಿರ, ದಾವಣಗೆರೆ.

## ದುಗ್ಗಮ್ಮನ ದೇವಸ್ಥಾನದಲ್ಲಿ ನಾಳೆ ಕಾರ್ತಿಕ



ದಾವಣಗೆರೆ,ಡಿ.26- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 28ರ ಮಂಗಳವಾರ ರಾತ್ರಿ 8.30ಕ್ಕೆ ಕಾರ್ತಿಕ ದೀಪೋತ್ಸವ ನಡೆಯಲಿದೆ. ಹಿರಿಯ ಶಾಸಕರೂ ಆಗಿರುವ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅವರು ದೀಪೋತ್ಸವಕ್ಕೆ ಚಾಲನೆ ನೀಡಲಿದ್ದಾರೆ ಎಂದು ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.


## ದೊಡ್ಡಬಾತಿಯಲ್ಲಿ ಸಂತೆ ನಿಷೇಧ

**ಇಂದು**

ದಾವಣಗೆರೆ ತಾಲ್ಲೂಕು ಗ್ರಾಮ ಪಂಚಾಯಿತಿ ಸಂಖ್ಯೆ 12-ದೊಡ್ಡಬಾತಿ ಯಲ್ಲಿ ಚುನಾವಣೆ ನಡೆಯುತ್ತಿದ್ದು, ಚುನಾವಣೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ದೊಡ್ಡಬಾತಿ ಗ್ರಾಮದಲ್ಲಿ ಇಂದು ನಡೆಯುವ ವಾರದ ಸಂತೆ, ಯಾವುದೇ ಜಾತ್ರೆಯನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ನೊಬೆಲ್ ಪುರಸ್ಕೃತ

## ಟುಟು ನಿಧನ



ಜೊಹಾನ್ಸ್‌ಬರ್ಗ್, ಡಿ.26 – ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಆರ್ಚ್‌ಬಿಷಪ್ ಡೆಸ್ಮಂಡ್ ಟುಟು ನಿಧನರಾಗಿದ್ದಾರೆ. ಅವರಿಗೆ 90 ವರ್ಷ ವಯಸ್ಸಾಗಿತ್ತು.

ಟುಟು ಅವರು ಕೇಪ್‌ಟೌನ್ ನಗರದಲ್ಲಿ ಭಾನುವಾರ ಬೆಳಗಿನ ಜಾವ ನಿಧನರಾಗಿದ್ದಾರೆ. ಅವರು ನೊಬೆಲ್ ಶಾಂತಿ ಪ್ರಶಸ್ತಿ ವಿಜೇತರೂ ಆಗಿದ್ದಾರೆ.

ಕ್ಷಯ ರೋಗ ಎದುರಿಸಿ ಉಳಿದಿದ್ದ ಟುಟು, 1997ರಲ್ಲಿ ಕ್ಯಾನ್ಸರ್ ಕಾರಣದಿಂದ ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದಾರೆ. ಆರೋಗ್ಯ ಸಮಸ್ಯೆಗಳಿಂದಾಗಿ ಅವರು ಇತ್ತೀಚಿನ ವರ್ಷಗಳಲ್ಲಿ ಹಲವು ಬಾರಿ ಆಸ್ಪತ್ರೆಗೆ ದಾಖಲಾಗಿದ್ದರು.

## ಕಾಯಿಪೇಟೆಯಲ್ಲಿ ಇಂದು ಕಾರ್ತಿಕ



ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಂದು ರಾತ್ರಿ 9 ಗಂಟೆಗೆ ಕಾರ್ತಿಕ ದೀಪೋತ್ಸವ ಜರುಗಲಿದೆ. ದೇವಸ್ಥಾನದಿಂದ ನಾಳೆ ಮಂಗಳವಾರ ಮತ್ತು ಬುಧವಾರ ನಡೆಸಲುದ್ದೇಶಿದ್ದ ಮಹೇಶ್ವರ ಜಾತ್ರೆಯನ್ನು ರದ್ದುಪಡಿಸಲಾಗಿದೆ. ಕೊರೊನಾದ ಮಾರ್ಗಸೂಚಿಯನ್ವಯ ಈ ಜಾತ್ರೆಯನ್ನು ಈ ವರ್ಷವೂ ರದ್ದುಪಡಿಸಿರುವುದಾಗಿ ದೇವಸ್ಥಾನ ಸಮಿತಿ ತಿಳಿಸಿದೆ.


BHM

## 50 ನೇ ವರ್ಷದ ಪುಣ್ಯಸ್ಮರಣೆ



### ದಿ. ಶ್ರೀ ಬಿ.ಹೆಚ್.ನಾರಪ್ಪನವರು

ನಿಧನ - 27.12.1971

*ನೀವು ನಮ್ಮನ್ನಗಲಿ ಇಂದಿಗೆ 50 ವರ್ಷಗಳಾದರೂ ಸಹ ನಿಮ್ಮ ನೆನಪು ನಮ್ಮಲ್ಲಿ ಸದಾ ಅಚ್ಚ ಹಸಿರಾಗಿದೆ. ನೀವು ಹೇಳಿ ಕೊಟ್ಟ ಆದರ್ಶಗಳು, ನಡೆ-ನುಡಿಗಳು, ನಯ-ವಿನಯಗಳೇ ನಮ್ಮಜೀವನದ ದಾರಿ ದೀಪವಾಗಿವೆ.*
*ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಸದಾ ಸ್ಮರಿಸುವ...*

**ಬಿ.ಹೆಚ್.ಮುನಿಯಪ್ಪ ಅಂಡ್ ಸನ್**
ದಾವಣಗೆರೆ ಮತ್ತು ಹುಬ್ಬಳ್ಳಿ.

**ಶ್ರೀ ನಾರದಮುನಿ ಕಮೋಡಿಟಿಸ್ ಸರ್ವಿಸಸ್**
ಮಂಡಿಪೇಟೆ, ದಾವಣಗೆರೆ.

**ಪ್ರಕಾಶ್ ಸೆಕ್ಯುರಿಟಿಸ್ ಅಂಡ್ ಫೈನಾನ್ಸ್**
ಮಂಡಿಪೇಟೆ, ದಾವಣಗೆರೆ.








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte